# ಮಹಾಸಭೆ: 19

## 2007–08 ರ ವಾರ್ಷಿಕ ಮಹಾಸಭೆ ತಾ॥ 27.07.2008

ಗ್ರಾಮಭಾರತಿ ವಿದ್ಯಾಸಂಸ್ಥೆ (ಹೇಮಗಿರಿ–ಕಿಕ್ಕೇರಿ ರಸ್ತೆ) ಕೆ.ಆರ್.ಪೇಟೆ ಸಂಸ್ಥೆಯ 2007–08 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ತಾ॥ 27.7.2008 ಭಾನುವಾರ ಬೆಳಿಗ್ಗೆ 11:00 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಮೀಟಿಂಗ್ ನಡವಳಿಕೆಗಳು

ಹಾಜರಿ :– ಹಾಜರಿಯಾಗಿದ್ದ ಸದಸ್ಯರ ಸಹಿಯನ್ನು ಅಲಾಯಿದ ಪಡೆಯಲಾಗಿದೆ

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಸಂಸ್ಥೆಯ ಬೋಧಕ ವೃಂದದವರಾದ ಮಂಜುಳ ಮೇಡಂರವರು ಹಾಗೂ ಸಂಗಡಿಗರು ದೇವತಾ ಪ್ರಾರ್ಥನೆ ನೆರವೇರಿಸಿ ಕೊಟ್ಟರು. |
| 2. | ಸ್ವಾಗತ ಭಾಷಣ | ಸಂಸ್ಥೆಯ ಪ್ರೌಢಶಾಲಾ ವಿಭಾಗದಲ್ಲಿ ಶಿಕ್ಷಕರಾಗಿರುವ ಟಿ. ಸುರೇಶ್ ರವರು ಸಂಸ್ಥೆಯ ಅಧ್ಯಕ್ಷರಿಗೂ, ಕಾರ್ಯದರ್ಶಿಯವರಿಗೂ, ನಿರ್ದೇಶಕರಿಗೂ, ಸದಸ್ಯರುಗಳಿಗೂ, ವಿದ್ಯಾಸಂಸ್ಥೆಯ ಬೋಧಕ–ಬೋಧಕೇತರ ವೃಂದದವರಿಗೆಲ್ಲ ಸ್ವಾಗತ ಕೋರಿದರು. |
| 3. | ಪೂಜ್ಯ ಎಸ್.ಸಿ. ಚಿಕ್ಕಣ್ಣಗೌಡರು, ಮಾಜಿ ಅಧ್ಯಕ್ಷರು ಹಾಗೂ ಜಿ.ನಾರಾಯಣ ಶೆಟ್ಟರು, ಮಾಜಿ ಉಪಾಧ್ಯಕ್ಷರು ದೈವಾಧೀನ ರಾಗಿದ್ದು ಅವರ ಆತ್ಮಕ್ಕೆ ಶಾಂತಿ ಕೋರಿ ಮೌನ ಆಚರಿಸುವುದು. | ಸಂಸ್ಥೆಯ ಮಾಜಿ ಅಧ್ಯಕ್ಷರನ್ನ ಕುರಿತು ಸದಸ್ಯರಾದ ಬಿ. ನಂಜಪ್ಪನವರು ಈ ಸಂಸ್ಥೆಯ ಪ್ರಗತಿಯಲ್ಲಿ ಎಸ್.ಸಿ. ಚಿಕ್ಕಣ್ಣಗೌಡರ ಸೇವೆ ಬಹಳವಾಗಿದೆ ಎಂದು ಹೇಳಿದರು. ಹಾಗೆ ಜಿ.ನಾರಾಯಣಶೆಟ್ಟರ ಸೇವೆಯನ್ನು ಶ್ಲಾಘಿಸಿದರು. ಜೊತೆಗೆ ಪಾಪೇಗೌಡರು, ಲಕ್ಷ್ಮೀಪತಿ ಜೋಯಿಸ್ ರವರು, ಬಿ.ಇಡಿ. ಪ್ರಾಚಾರ್ಯರಾದ ಪಿ. ಸುರೇಶ್ ರವರು, ಡಿ.ಇಡಿ. ಪ್ರಾಚಾರ್ಯರಾದ ಚಂದ್ರ ಮೋಹನ್.ಕೆ.ಎನ್.ರವರು ಪಿ.ಯು.ಸಿ. ಪ್ರಾಚಾರ್ಯರಾದ ಎಂ.ಎಂ.ಮಹದೇವ್ ರವರು, ಪ್ರೌಢಶಾಲೆಯ |

| | | |
|---|---|---|
| | | ಮುಖ್ಯೋಪಾಧ್ಯಾಯರಾದ ಬಸವರಾಜಯ್ಯನವರು ಮಾತನಾಡಿ ಈ ಸಂಸ್ಥೆಯ ಪ್ರಗತಿಗೆ ಎಸ್.ಸಿ.ಚಿಕ್ಕಣ್ಣ ಗೌಡರ ಹಾಗೂ ನಾರಾಯಣಶೆಟ್ಟರ ಶ್ರಮವನ್ನ ಶ್ಲಾಘಿಸಿದರು. ಈ ಗಣ್ಯರೀರ್ವರಿಗೆ ಸಭೆಯು ಮೌನ ಆಚರಿಸುವುದರ ಮೂಲಕ ಅವರ ಆತ್ಮಕ್ಕೆ ಶಾಂತಿ ಕೋರಿತು. |
| 4. | ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು. | 2007–08 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಬಿ.ಎಡ್. ಉಪನ್ಯಾಸಕರಾದ ನಾಗೇಶ್ ರವರು ಓದಿ, ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡಲಾಯಿತು. |
| 5. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು. | ಹಿಂದಿನ ಮಹಾಸಭೆಯ ವರದಿಯನ್ನು ಡಿ.ಇಡಿ. ಪ್ರಾಚಾರ್ಯರಾದ ಕೆ.ಎನ್.ಚಂದ್ರಮೋಹನ್ ರವರು ಓದಿದರು. ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡಲಾಯಿತು. |
| 6. | ಸಂಘದ ವರದಿಯನ್ನು ಮಂಡಿಸುವುದು. | ಸಂಘದ ವರದಿಯನ್ನು ಪಿ.ಯು.ಸಿ ಪ್ರಾಚಾರ್ಯರಾದ ಎಂ.ಎಂ.ಮಹದೇವುರವರು ಮಂಡಿಸಿದರು. ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಿದ್ದನ್ನು ರೆಕಾರ್ಡ್ ಮಾಡಲಾಯಿತು. |
| 7. | 2007–08 ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸು ವುದು. | 2007–08 ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನ ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಹೆಚ್.ಎಸ್.ಕೃಷ್ಣ ರವರು ಮಂಡಿಸಿದರು. ಈ ವರದಿಯನ್ನ ಸಭೆಯು ಚರ್ಚಿಸಿ ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಿದ್ದನ್ನು ರೆಕಾರ್ಡ್ ಮಾಡಲಾಯಿತು. |
| 8. | 2008–2009 ನೇ ಸಾಲಿಗೆ ಬಡ್ಜೆಟ್ ಮಂಜೂರು ಮಾಡುವುದು | 2007–08 ನೇ ಸಾಲಿಗೆ ಈ ಕೆಳಕಂಡಂತೆ ಬಡ್ಜೆಟ್ ಮಂಜೂರಾತಿಯನ್ನು ಕಾರ್ಯದರ್ಶಿಯವರಾದ ಎ.ಎಂ.ನಂಜುಂಡೇಗೌಡರು ಮಂಡಿಸಿದರು. ಸಭೆಯು |

| | | |
|---|---|---|
| | | ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಬಹುದೆಂದು ತೀರ್ಮಾನಿಸಿತು. |

| | | | |
|---|---|---|---|
| 1. | ಬಿ.ಇಡಿ. ವಿಭಾಗದ ಸಂಬಳ | : | 7,00,000–00 |
| 2. | ಡಿ.ಇಡಿ. ವಿಭಾಗದ ಸಂಬಳ | : | 6,50,000–00 |
| 3. | P.U.C. ವಿಭಾಗದ ಸಂಬಳ | : | 5,50,000–00 |
| 4. | ನರ್ಸರಿ, ಪ್ರಾಥಮಿಕ, ಪ್ರೌಢಶಾಲೆ ವಿಭಾಗದ ಸಂಬಳ | : | 5,00,000–00 |
| 5. | ವಿದ್ಯುತ್ ಶುಲ್ಕ | : | 75,000–00 |
| 6. | ಮಹಾಸಭ ಖರ್ಚು | : | 30,000–00 |
| 7. | ಪುಸ್ತಕ ಭಂಡಾರ | : | 1,50,000–00 |
| 8. | ವಿಜ್ಞಾನ ಉಪಕರಣಗಳು | : | 1,00,000–00 |
| 9. | ಪ್ರಯಾಣ ಬತ್ತಿ | : | 1,00,000–00 |
| 10. | ಅತಿಥಿ ಸತ್ಕಾರ | : | 40,000–00 |
| 11. | ಅಂಚೆ ವೆಚ್ಚ | : | 10,000–00 |
| 12. | ಅನಿರೀಕ್ಷಿತ ವೆಚ್ಚ | : | 40,000–00 |
| 13. | ಜಾಹೀರಾತು ವೆಚ್ಚ | : | 25,000–00 |
| 14. | ಫರ್ನಿಚರ್ ವೆಚ್ಚ | : | 1,00,000–00 |
| 15. | ಸಾಧ್ಯಲ್ವಾರ್ ವೆಚ್ಚ ಮತ್ತು ಲೇಖನ ಸಾಮಗ್ರಿ | : | 30,000–00 |
| 16. | ವಿದ್ಯಾಸಂಸ್ಥೆ ಕಟ್ಟಡ ಮತ್ತು ಆಸ್ತಿ ನಿರ್ವಹಣಾ ವೆಚ್ಚ | : | 5,00,000–00 |
| | ಒಟ್ಟು | : | 36,00,000–00 |

ಮೇಲ್ಕಂಡಂತೆ ಬಡ್ಜೆಟ್ ಗೆ ಅನುಮತಿ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಿತು.

| | | |
|---|---|---|
| 9. | 2008–09 ಸಾಲಿನ ಆಡಳಿತ ಮಂಡಳಿ ರಚನೆ | ಗ್ರಾಮಭಾರತಿ ವಿದ್ಯಾ ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಬಗ್ಗೆ ಕಾರ್ಯದರ್ಶಿಯವರು ಅವರ ಹೆಸರು ಮತ್ತು ಪದನಾಮಗಳ ಬಗ್ಗೆ ಮಂಡಿಸಿದರು. |

ಆಡಳಿತ ಮಂಡಳಿ ಪದಾಧಿಕಾರಿಗಳು

1. ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು – ಅಧ್ಯಕ್ಷರು
2. ಶ್ರೀ ಎ.ಎಂ.ನಂಜುಂಡೇಗೌಡರು – ಕಾರ್ಯದರ್ಶಿಗಳು
3. ಶ್ರೀ ಕೆ.ಜಿ.ಹುಚ್ಚೇಗೌಡರು – ಖಜಾಂಚಿಗಳು
4. ಶ್ರೀ ಎಂ.ಜಿ.ಗಿರೀಗೌಡ್ರು – ನಿರ್ದೇಶಕರು
5. ಶ್ರೀ ಎಲ್.ಜಿ.ನಾರಾಯಣಗೌಡರು – ನಿರ್ದೇಶಕರು
6. ಶ್ರೀ ಎಸ್.ಎಸ್.ಶಾಂತಹೃದಯರವರು – ನಿರ್ದೇಶಕರು
7. ಶ್ರೀ ಬಿ.ಎಸ್.ಲಕ್ಷ್ಮೀಪತಿ ಜೋಯಿಸರು – ನಿರ್ದೇಶಕರು
8. ಶ್ರೀ ಎಸ್.ಸಿ.ರಾಮಲಿಂಗೇಗೌಡರು – ನಿರ್ದೇಶಕರು
9. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು – ನಿರ್ದೇಶಕರು

| | | |
|---|---|---|
| 10. | ಅಧ್ಯಕ್ಷರ ಭಾಷಣ | ವಿದ್ಯಾಸಂಸ್ಥೆಯ ಅಧ್ಯಕ್ಷರು ಹಾಗೂ ಈ ವಾರ್ಷಿಕ ಮಹಾಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡು ಅಧ್ಯಕ್ಷರ ಭಾಷಣದಲ್ಲಿ ಸಂಸ್ಥೆಯ ಸ್ಥಾಪಕರಾದ ಕರ್ಮಯೋಗಿ ಎಸ್.ಎಂ.ಲಿಂಗಪ್ಪನವರು ಹಾಗೂ ಈ ಸಂಸ್ಥೆಯ ಅಭ್ಯುದಯದ ನೇತಾರರಾದ ಶ್ರೀ ಎಸ್.ಸಿ. ಚಿಕ್ಕಣ್ಣಗೌಡರು ಬದುಕಿದ್ದಾಗ ಪ್ರತಿಯೊಬ್ಬರು ತಮ್ಮ ಬದುಕು ಏತಕ್ಕಾಗಿ ಎಂಬುದನ್ನ ಅರ್ಥ ಮಾಡಿಕೊಂಡು ಬದುಕಿಗೆ ಅರ್ಥ ತುಂಬಬೇಕೆಂದು ಹೇಳುತ್ತಿದ್ದರು. ಜೊತೆಗೆ ನುಡಿದಂತೆ ನಡೆದರು. ಅವರ ಶ್ರಮವೇ ಈ ಸಂಸ್ಥೆ 60–70 ಜನಕ್ಕೆ ಜೀವನಾಧಾರವಾಗಲು ಕಾರಣ ವಾಗಿದೆ. ಅವರ ಹಾದಿಯಲ್ಲಿ ನಾನು ಈ ಸಂಸ್ಥೆಯ ಯಶಸ್ಸಿಗೆ ಶ್ರಮಿಸುತ್ತೇನೆ. ಪಶ್ಚಿಮ ಭಾಗದಲ್ಲಿ ಕಟ್ಟಡಕ್ಕೆ ತೊಡಕಾಗಿರುವುದನ್ನ ಸರಿಪಡಿಸಲು ಸಂಬಂಧಪಟ್ಟವ ರೊಂದಿಗೆ ಸಮಾಲೋಚಿಸಿದ್ದೇನೆ. ಅದನ್ನ ಸರಿಪಡಿಸಲು ಶ್ರಮಿಸುತ್ತೇನೆ. ಸಂಸ್ಥೆಯ ಎಲ್ಲಾ ನೌಕರರ ಪ್ರಾಮಾಣಿಕ ದುಡಿಮೆಗೆ ಸದಾ ಸಹಕಾರಿಯಾಗಿರುತ್ತೇನೆ. ಎಲ್ಲರೂ |

| | | |
|---|---|---|
| | | ಸಹಕಾರ ಮನೋಭಾವದಿಂದ ಕಾರ್ಯನಿರ್ವಹಿಸಿ ಈ ವಿದ್ಯಾಸಂಸ್ಥೆಯನ್ನ ಇನ್ನೂ ಎತ್ತರಕ್ಕೆ ಬೆಳೆಸೋಣ ಎಂದು ನುಡಿದರು. ಸದಸ್ಯರಾದ ಪ್ರಕಾಶ್ ರವರ ಸಲಹೆಯಂತೆ ತರಗತಿಗಳಿಗೆ ಮಾಜಿ ಅಧ್ಯಕ್ಷರ ಭಾವಚಿತ್ರ ಹಾಕಿಸಲು ಪ್ರಯತ್ನಿಸುವುದಾಗಿ ತಿಳಿಸಿದರು. |
| 11. | ವಂದನಾರ್ಪಣೆ | ಸಂಸ್ಥೆಯ ಡಿ.ಇಡಿ. ವಿಭಾಗದ ಉಪನ್ಯಾಸಕರಾದ ಶಿವರಾಮೇಗೌಡರು ಸಭೆಯ ಎಲ್ಲಾ ಉಪಸ್ಥಿತರಿಗೂ ವಂದನಾರ್ಪಣೆ ಮಾಡಿದರು. |
| 12. | ರಾಷ್ಟ್ರಗೀತೆ | ರಾಷ್ಟ್ರಗೀತೆಯನ್ನು ಸರ್ವರೂ ಹಾಡುವುದರ ಮೂಲಕ ವಾರ್ಷಿಕ ಮಹಾಸಭೆಯನ್ನು ಮುಕ್ತಾಯಗೊಳಿಸ ಲಾಯಿತು. |

ತಾ॥ 27–07–2008 –ಸಹಿ–

ಗ್ರಾಮಭಾರತಿ ವಿದ್ಯಾಸಂಸ್ಥೆ ಎಸ್.ಸಿ.ಕಿರಣ್ ಕುಮಾರ್ (27–07–2008)

ಕೆ.ಆರ್.ಪೇಟೆ ಸಭಾಧ್ಯಕ್ಷರು

## ಮಹಾಸಭೆ: 20

**2008–09 ನೇ ಸಾಲಿನ ವಾರ್ಷಿಕ ಮಹಾಸಭೆ** **ತಾ॥ 19.7.09**

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೆ.ಆರ್.ಪೇಟೆ ಈ ಸಂಸ್ಥೆಯ 2008–09 ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ॥ 19.07.09 ಭಾನುವಾರ ಬೆಳಿಗ್ಗೆ 11:00 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಿ, ಈ ಸಭೆಯಲ್ಲಿನ ಮೀಟಿಂಗ್ ನಡವಳಿಕೆಗಳು.

ಹಾಜರಿ :– ಹಾಜರಿಯಾಗಿದ್ದ ಸದಸ್ಯರ ಸಹಿಯನ್ನು ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಸಂಸ್ಥೆಯ ಬೋಧಕ ವೃಂದದವರಾದ ಮಂಜುಳಾ ಹಾಗೂ ಹಿತೈಷಿಣಿರವರು ದೇವತಾ ಪ್ರಾರ್ಥನೆ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ಸಂಸ್ಥೆಯ ಪ್ರೌಢಶಾಲಾ ವಿಭಾಗದ ಮುಖ್ಯಸ್ಥರಾದ ಬಸವರಾಜಯ್ಯನವರು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಯವರು, ನಿರ್ದೇಶಕರುಗಳಿಗೆ, ಸರ್ವ ಸದಸ್ಯರಿಗೆ ಹಾಗೂ ಸಂಸ್ಥೆಯ ಎಲ್ಲಾ ಬೋಧಕ, ಬೋಧಕೇತರ ವರ್ಗದವರೆಲ್ಲರಿಗೂ ಸ್ವಾಗತ ಕೋರಿದರು |
| | ಶ್ರದ್ಧಾಂಜಲಿ | ಈ ಹಿಂದೆ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿ ಕಳೆದ ವರ್ಷ ನಿಧನರಾದ ತಿಮ್ಮೇಗೌಡರಿಗೆ ಅಧ್ಯಕ್ಷರ ಸೂಚನೆಯಂತೆ ಒಂದು ನಿಮಿಷ ಮೌನ ಆಚರಿಸುವುದ ರೊಂದಿಗೆ ಸಭೆ ಶ್ರದ್ಧಾಂಜಲಿ ಕೋರಿತು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು. | 2008–09 ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಬಿ.ಇಡಿ. ಪ್ರಾಚಾರ್ಯರಾದ ಪಿ.ಸುರೇಶ್ ರವರು ಓದಿ, ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡಲಾಯಿತು. |

| | | |
|---|---|---|
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು. | ಹಿಂದಿನ ಮಹಾಸಭೆಯ ವರದಿಯನ್ನು ಡಿ.ಇಡಿ. ಪ್ರಾಚಾರ್ಯರಾದ ಕೆ.ಎನ್.ಚಂದ್ರಮೋಹನ್ ರವರು ಓದಿದರು. ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡುದನ್ನು ರೆಕಾರ್ಡ್ ಮಾಡಲಾಯಿತು. |
| 5. | ಸಂಘದ ವರದಿಯನ್ನು ಮಂಡಿಸುವುದು. | 2008–09 ನೇ ಸಾಲಿನಲ್ಲಿ ಸಂಸ್ಥೆಯು ಕೈಗೊಂಡ ಕಾರ್ಯಕ್ರಮಗಳನ್ನ ಕಿರುಚಿತ್ರದ ಮೂಲಕ ಪ್ರದರ್ಶಿಸ ಲಾಯಿತು. ಅದನ್ನ ವೀಕ್ಷಿಸಿದ ಸರ್ವ ಸದಸ್ಯರು ಒಪ್ಪಿಗೆ ನೀಡಿದ್ದು ಅದನ್ನ ರೆಕಾರ್ಡ್ ಮಾಡಲಾಯಿತು. |
| 6. | 2008–09ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಪರಿಶೀಲಿಸಿ ಅಂಗೀಕರಿಸು ವುದು. | 2008–09 ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಮಂಡಿಸಿದರು ಜೊತೆಯಾಗಿ ಪರದೇ ಮೇಲು ತೋರಿಸಲಾಯಿತು. ಸರ್ವ ಸದಸ್ಯರು ಇದನ್ನ ಕೇಳಿ ವೀಕ್ಷಿಸಿ ಸದಸ್ಯರಾದ ಕೆ.ಆರ್.ಪುಟ್ಟಸ್ವಾಮಿ ಯವರು ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಲಾಭದಲ್ಲಿದೆ ಎಂದು ಪ್ರಶಂಸಿಸಿದರು. ಆ ಸಂದರ್ಭದಲ್ಲಿ ಅಧ್ಯಕ್ಷರು ಮಾತನಾಡಿ ಲಾಭ ಕೇವಲ ವಾರ್ಷಿಕ ಆಡಿಟ್ ನಲ್ಲಿದೆ ಆದರೆ ಪ್ರಸ್ತುತ ಸಂಸ್ಥೆ ಆರ್ಥಿಕವಾಗಿ ಪೂರ್ಣ ಸಬಲವಾಗಿಲ್ಲ. ಪ್ರಸ್ತುತ ವರ್ಷ 8 ಲಕ್ಷ (ಎನ್.ಸಿ.ಟಿ.ಇ ಆದೇಶದಂತೆ) ಮತ್ತೆ ಫಿಕ್ಸೆಡ್ ಇರಬೇಕಾಗಿದೆ, ಆದ್ದರಿಂದ ಆರ್ಥಿಕ ದೃಢತೆ ಇರುವ ಯಾವುದೇ ಸದಸ್ಯರು ಸಂಸ್ಥೆಗೆ ಹಣಕಾಸಿನ ಸಹಕಾರ ನೀಡಿದರೆ ಸಂಸ್ಥೆಯ ಪ್ರಗತಿಗೆ ಸಹಕರಿಸಿದಂತಾಗುತ್ತದೆ ಎಂದು ಹೇಳಿದರು. ಸಭೆಯು ಈ ವರದಿಗೆ ಒಪ್ಪಿಗೆ ನೀಡಿದ್ದರಿಂದ, ವರದಿಯನ್ನ ರೆಕಾರ್ಡ್ ಮಾಡಲಾಯಿತು. |

| | | |
|---|---|---|
| 7. | 2009–2010 ನೇ ಸಾಲಿಗೆ ಬಡ್ಜೆಟ್ ಮಂಜೂರು ಮಾಡುವುದು. | ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಎ.ಎಂ.ನಂಜುಂಡೇಗೌಡರು 2009–2010 ನೇ ಸಾಲಿಗೆ ಮಾಡಿರುವ ಬಡ್ಜೆಟ್ ಮಂಡನೆ ಮಾಡಿದರು.<br>ಈ ಸಂದರ್ಭದಲ್ಲಿ ಸದಸ್ಯರಾದ ಬಿ.ನಂಜಪ್ಪನವರು ಹಾಗೂ ಕೆ.ರಾಜೇಗೌಡರು, ಪ್ರಕಾಶ್ ರವರು, ರಾಜಣ್ಣನವರು ಸಂಸ್ಥೆಯ ಆರ್ಥಿಕ ಉನ್ನತಿಗೆ ಶಾಸಕರು, ಸಂಸದರ ನಿಧಿಯ ಹಣವನ್ನು ಪಡೆಯಲು ಪ್ರಯತ್ನ ನಡೆಸುವುದು ಉತ್ತಮ ಅದಕ್ಕೆ ಕಾರ್ಯ ಪ್ರವೃತ್ತ ರಾಗಬೇಕು ಎಂದು ಹೇಳಿದರು. ಮತ್ತೋರ್ವ ಸದಸ್ಯ ರಾದ ಎನ್.ಕೆ.ಲಿಂಗೇಗೌಡರು ಮಾತನಾಡಿ ಹಣಕಾಸಿ ಗಿಂತ ಮುಖ್ಯವಾಗಿ ಸಂಸ್ಥೆ ತಾಲೂಕಿನಲ್ಲಿ ಉತ್ತಮ ಹೆಸರಿನೊಂದಿಗೆ ನಡೆಯಬೇಕು. ಆ ದಿಸೆಯಲ್ಲಿ ನಿಮ್ಮಗಳ ಪ್ರಯತ್ನವಿರಲಿ ಎಂದು ಹೇಳಿದರು. ಸರ್ವ ಸದಸ್ಯರು ಬಡ್ಜೆಟ್ ಮಂಜೂರಾತಿಗೆ ಒಪ್ಪಿಗೆ ನೀಡಿದ್ದರಿಂದ, ಮಂಜೂರಾತಿಯನ್ನು ರೆಕಾರ್ಡ್ ಮಾಡಲಾಯಿತು. |

**<u>ಬಡ್ಜೆಟ್ ವಿವರ</u>**

| | | |
|---|---|---|
| 1. ಬಿ.ಇಡಿ. ನೌಕರರ ಸಂಬಳ | : | 8,00,000–00 |
| 2. ಡಿ.ಇಡಿ. ನೌಕರರ ಸಂಬಳ | : | 7,00,000–00 |
| 3. ಪಿ.ಯು.ಸಿ ನೌಕರರ ಸಂಬಳ | : | 5,50,000–00 |
| 4. ಪ್ರಾಥಮಿಕ ಪ್ರೌಢಶಾಲೆ ನೌಕರರ ಸಂಬಳ | : | 5,00,000–00 |
| 5. ವಿದ್ಯುಚ್ಛಕ್ತಿ ಶುಲ್ಕ | : | 75,000–00 |
| 6. ವಾರ್ಷಿಕ ಮಹಾಸಭೆಯ ಖರ್ಚು | : | 40,000–00 |
| 7. ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | : | 1,00,000–00 |
| 8. ಪ್ರಯಾಣ ಭತ್ಯೆ | : | 1,00,000–00 |
| 9. ಅತಿಥಿ ಸತ್ಕಾರ | : | 50,000–00 |

| | | |
|---|---|---|
| 10. ಅಂಚೆ ವೆಚ್ಚ | : | 10,000–00 |
| 11. ಅನಿರೀಕ್ಷಿತ ವೆಚ್ಚ | : | 50,000–00 |
| 12. ಜಾಹೀರಾತು ವೆಚ್ಚ | : | 25,000–00 |
| 13. ಫರ್ನಿಚರ್ ವೆಚ್ಚ | : | 1,00,000–00 |
| 14. ಸಾದಿಲ್ವಾರ್ ಮತ್ತು ಲೇಖನ ಸಾಮಗ್ರಿಗಳು | : | 35,000–00 |
| 15. ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣಾ ವೆಚ್ಚ | : | 15,00,000–00 |
| 16. ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | : | 17,00,000–00 |
| 17. ಸ್ಥಿರ ನಿಧಿಗಾಗಿ | : | 11,00,000–00 |
| ಒಟ್ಟು | : | 74,35,000–00 |

| | | |
|---|---|---|
| 8. | 2009–10 ನೇ ಸಾಲಿಗೆ ಆಡಳಿತ ಮಂಡಳಿ ರಚನೆ. | 2009–2010 ನೇ ಸಾಲಿಗೆ ಆಡಳಿತ ಮಂಡಳಿ ಸದಸ್ಯರ ಹೆಸರು ಪದನಾಮಗಳನ್ನ ಕಾರ್ಯದರ್ಶಿಗಳಾದ ಎ.ಎಂ.ನಂಜುಂಡೇಗೌಡರು ಮಂಡಿಸಿದರು. |

| **ಹೆಸರು** | | **ಪದನಾಮ** |
|---|---|---|
| 1. ಶ್ರೀ ಎಸ್.ಸಿ.ಕಿರಣ್ ಕುಮಾರ್ | – | ಅಧ್ಯಕ್ಷರು |
| 2. ಶ್ರೀ ಎ.ಎಂ.ನಂಜುಂಡೇಗೌಡರು | – | ಕಾರ್ಯದರ್ಶಿ |
| 3. ಶ್ರೀ ಕೆ.ಜಿ.ಹುಚ್ಚೇಗೌಡರು | – | ಖಜಾಂಚಿ |
| 4. ಶ್ರೀ ಎಲ್.ಜಿ.ನಾರಾಯಣಗೌಡರು | – | ನಿರ್ದೇಶಕರು |
| 5. ಶ್ರೀ ಎಸ್.ಎಸ್.ಶಾಂತಹೃದಯರವರು | – | ನಿರ್ದೇಶಕರು |
| 6. ಶ್ರೀ ಬಿ.ಎಸ್.ಲಕ್ಷ್ಮೀಪತಿಜೋಯಿಸರು | – | ನಿರ್ದೇಶಕರು |
| 7. ಶ್ರೀ ಎಸ್.ಸಿ.ರಾಮಲಿಂಗೇಗೌಡರು | – | ನಿರ್ದೇಶಕರು |
| 8. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು | – | ನಿರ್ದೇಶಕರು |
| 9. ಶ್ರೀ ಎಸ್.ಕೆ.ರಂಗಸ್ವಾಮಿರವರು | – | ನಿರ್ದೇಶಕರು |

ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಿದ್ದು ರೆಕಾರ್ಡ್ ಮಾಡಲಾಯಿತು.

| | | |
|---|---|---|
| 9. | ಸಂಸ್ಥೆಯ ಸದಸ್ಯರಿಗೆ ಗುರುತಿನ ಚೀಟಿಯನ್ನ ಕಡ್ಡಾಯಗೊಳಿಸುವ ವಿಚಾರ. | ಸಂಸ್ಥೆಯ ಸರ್ವ ಸದಸ್ಯರಿಗೂ ಗುರುತಿನ ಚೀಟಿಯನ್ನು ಪಡೆಯುವಂತೆ ಹೇಳಬೇಕು. ಪ್ರತಿಯೊಬ್ಬರೂ ಗುರುತಿನ |

| | | |
|---|---|---|
| | | ಚೀಟಿ ಪಡೆಯಲು ಮೂರು ಅವಕಾಶಗಳನ್ನ ನೀಡುವ, ಆದರೂ ಮೂರು ಅವಧಿಯಲ್ಲು ಗುರುತಿನ ಚೀಟಿ ಪಡೆದುಕೊಳ್ಳದವರನ್ನು ಸಂಸ್ಥೆಯಿಂದ ವಜ ಮಾಡೋಣ ಎಂಬ ಅಧ್ಯಕ್ಷರ ತೀರ್ಮಾನಕ್ಕೆ ಸರ್ವ ಸದಸ್ಯರು ಒಪ್ಪಿಗೆ ನೀಡಿ ಅಂಗೀಕಾರ ಮಾಡಲಾಯಿತು.<br>ಅಧ್ಯಕ್ಷರ ಅಪ್ಪಣೆ ಪಡೆದು ಮಾತನಾಡಿದ ಸದಸ್ಯರಾದ ಬಿ.ನಂಜಪ್ಪನವರು ಸರ್ವ ಸದಸ್ಯರ ಸಭೆಗೆ ಹೆಚ್ಚಿನ ಸದಸ್ಯರು ಬಂದಲ್ಲಿ ಸಭೆಗೆ ಶೋಭೆ ಎಂದು ಹೇಳಿದರು. ಹಾಗೆ ಸಂಸ್ಥೆ ಏಳಿಗೆಗೆ ದುಡಿಯುತ್ತಿರುವ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ಹಾಗೂ ಅವರ ತಾಯಿ ಹಾಗೂ ನಿರ್ದೇಶಕಿಯಾಗಿರುವ ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು ಸಂಸ್ಥೆಯಲ್ಲಿ ಕಾಯ, ವಾಚ, ಮನಸ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೆ ಇಳಿವಯಸ್ಸಿನಲ್ಲೂ ಸಂಸ್ಥೆಗೆ ಶ್ರಮಿಸುತ್ತಿರುವ ಕಾರ್ಯದರ್ಶಿಯವರಾದ ನಂಜುಂಡೇಗೌಡರನ್ನು ಹಾಗೂ ಬೋಧಕ ವೃಂದದವರನ್ನು ಶ್ಲಾಘಿಸಿದರು. ಹಾಗೆ ಸಂಸ್ಥೆಗೆ 25,000 ರೂ. ನೀಡುತ್ತೇನೆ. ಸಂಸ್ಥೆ ಸಾಧ್ಯವಾದಾಗ ನನಗೆ ವಾಪಸ್ ನೀಡಲಿ ಎಂದು ಹೇಳಿದರು.<br>ನಿರ್ದೇಶಕರಾದ ಎಸ್.ಸಿ.ರಾಮಲಿಂಗೇಗೌಡರು ಮಾತನಾಡಿ ಹಿಂದಿನ ಅಧ್ಯಕ್ಷರಾದ ಎಸ್ ಸಿ ಚಿಕ್ಕಣ್ಣಗೌಡರ ಆಸೆಯಂತೆ ಮಾಜಿ ಸಂಸದ ಅಂಬರೀಶ್ ಹಾಗೂ ರಾಜ್ಯಸಭಾ ಸದಸ್ಯರಾದ ರಹಮಾನ್ ಖಾನ್ ರನ್ನು ಸಂಸ್ಥೆಗೆ ಕರೆಸಿ ಸನ್ಮಾನಿಸೋಣ ಎಂದು ಹೇಳಿದರು.<br>ಮತ್ತೊಬ್ಬ ನಿರ್ದೇಶಕರಾದ ರಾಜಣ್ಣರವರು ಮಾತನಾಡಿ ಹಿಂದಿನ ಅಧ್ಯಕ್ಷರುಗಳಾದ ಎಸ್.ಎಂ.ಲಿಂಗಪ್ಪನವರು ಹಾಗೂ ಚಿಕ್ಕಣ್ಣಗೌಡರು |

| | | |
|---|---|---|
| | | ಸಾರ್ವಜನಿಕ ಆಸ್ತಿಯನ್ನು ಸರ್ಪದಂತೆ ಕಾಯುವವರು, ಬಯ್ಯುವವರೆಲ್ಲ ಬಂಧುಗಳಯ್ಯ ಎಂಬ ನಾಲ್ನುಡಿಯಂತೆ ಬದುಕಿದವರು ಎಂದು ಹೇಳಿದರು.<br>ಮತ್ತೋರ್ವ ನಿರ್ದೇಶಕರಾದ ರಾಮ್ ಪ್ರಸಾದ್ ರವರು ಮಾತನಾಡಿ ರಾಮಕೃಷ್ಣ ಆಶ್ರಮದ ಸ್ವಾಮಿಗಳನ್ನು ಸಂದರ್ಭವೊದಗಿದಾಗ ಕರೆಸಿ ಆಧ್ಯಾತ್ಮಿಕ ಕಾರ್ಯಕ್ರಮ ಹಮ್ಮಿಕೊಂಡು ಸಂಸ್ಥೆಯಲ್ಲಿ ಸಂಪೂರ್ಣ ನೈತಿಕ ಬೆಳವಣಿಗೆಗೆ ಕಾರ್ಯಕ್ರಮ ಹಮ್ಮಿಕೊಳ್ಳುವುದು ಸೂಕ್ತ ಎಂದು ಹೇಳಿದರು.<br>ನಿರ್ದೇಶಕರಾದ ಎಸ್.ಕೆ.ರಂಗಸ್ವಾಮಿ ಅವರು ಮಾತನಾಡಿ ಎಸ್.ಎಂ.ಲಿಂಗಪ್ಪನವರು ಹಾಗೂ ಎಸ್.ಸಿ.ಚಿಕ್ಕಣ್ಣಗೌಡರ ಹಾದಿಯಲ್ಲಿ ನಾವೆಲ್ಲ ಈ ಸಂಸ್ಥೆಯನ್ನ ಬೆಳೆಸೋಣ ಎಂದು ಹೇಳಿದರು. |
| 10. | ಅಧ್ಯಕ್ಷರ ಭಾಷಣ | ಸಂಸ್ಥೆಯ ಅಧ್ಯಕ್ಷರು ಹಾಗೂ ಮಹಾಸಭೆಯ ಅಧ್ಯಕ್ಷರು ಆದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಂಸ್ಥೆಯ ಹಿತದೃಷ್ಟಿಯಿಂದ ಸಂಸ್ಥೆಯ ಪಶ್ಚಿಮ ಭಾಗದಲ್ಲಿರುವ ಖಾಲಿ ಜಾಗವನ್ನ ಸೂಕ್ತ ರೀತಿಯಲ್ಲಿ ಮುಚ್ಚುವುದು ಸೂಕ್ತ. ಈ ದಿಸೆಯಲ್ಲಿ ದೇವಾಲಯದವರಲ್ಲಿಟ್ಟ ನಮ್ಮ ಬೇಡಿಕೆ ಈಡೇರದ ಕಾರಣ ನ್ಯಾಯಾಲಯದ ಆದೇಶ ಪಡೆದು ಕಾನೂನು ಕ್ರಮ ಕೈಗೊಳ್ಳೋಣ ಎಂದು ಸೂಚಿಸಲು, ಸದಸ್ಯರಾದ ಬಿ. ನಂಜಪ್ಪನವರು ಹಾಗೂ ಪುಟ್ಟಸ್ವಾಮಿಯವರು ಅದಕ್ಕೆ ಮೊದಲು ಒಂದು ಪ್ರತ್ಯೇಕ ಸಮಿತಿ ರಚಿಸಿ ಪ್ರಯತ್ನಿಸೋಣ ಎನ್ನಲು ಅಧ್ಯಕ್ಷರು ಹಾಗೂ ಸಭೆ ಅದಕ್ಕೆ ಸಮ್ಮತಿ ಸೂಚಿಸಿತು. ಮುಂದುವರಿದು ಸದಸ್ಯರಾದ ರಾಜಣ್ಣನವರು ಸಂಸ್ಥೆಯಲ್ಲಿ ಸಂಸ್ಥೆಗೆ ಶ್ರಮಿಸಿದವರ ಫೋಟೋ ಹಾಕಿಸಲು ಸೂಚಿಸಿದ್ದನ್ನ ಪ್ರಸ್ತಾಪಿಸಿ ಹಿರಿಯರ ಫೋಟೋ ಗಳಿಗಿಂತ ಅವರ ಆದರ್ಶಗಳನ್ನ ನಾವು ಅಳವಡಿಸಿಕೊಳ್ಳೋಣ ಎಂದು ಹೇಳಿದರು. ಸಂಸ್ಥೆಯ ಎಲ್ಲಾ ಹಣಕಾಸಿನ ವ್ಯವಹಾರಗಳನ್ನ ಚೆಕ್ ಮೂಲಕವೇ ನಡೆಸಲಾಗುತ್ತಿದೆ. |

| | | |
|---|---|---|
| | | ಸಂಸ್ಥೆಯ ಲೆಕ್ಕಪತ್ರ ವರದಿಯನ್ನು ವೆಬ್ ಸೈಟ್ ನಲ್ಲಿ ಅಳವಡಿಸಿರುತ್ತೇವೆ. ರಾಮ್ ಪ್ರಸಾದ್ ರವರು ಸೂಚಿಸಿದ ವಿದ್ಯಾನಿಧಿ ವ್ಯವಸ್ಥೆ ಉತ್ತಮ ಸೂಚನೆಯಾಗಿದ್ದು. ಆ ವಿದ್ಯಾನಿಧಿ ವ್ಯವಸ್ಥೆ ಮಾಡಿ ಅದಕ್ಕೆ ಹಣ ನೀಡುವವರಿಗೆ ಸೂಕ್ತ ದಾಖಲೆ ವ್ಯವಸ್ಥೆ ಮಾಡಲು ಪ್ರಯತ್ನಿಸುತ್ತೇನೆ ಎಂದು ಹೇಳಿದರು. ಇದಕ್ಕೆ ಪೂರಕವೆಂಬಂತೆ ಆಪತ್ ನಿಧಿ ಯೋಜನೆ ನಮ್ಮಲ್ಲಿ ರೂಡಿಸಿಕೊಂಡಿದ್ದೇವೆ ಎಂದು ಹೇಳಿದರು. ಸಂಸ್ಥೆಯ ಯಾವುದೇ ಉತ್ತಮ ಕಾರ್ಯಗಳಿಗೂ ಶ್ರಮಿಸುತ್ತ ನಿಮ್ಮೆಲ್ಲರ ಸಹಕಾರದಿಂದ ಈ ವಿದ್ಯಾಸಂಸ್ಥೆಯನ್ನು ಉತ್ತಮವಾಗಿ ಮುನ್ನಡೆಸುತ್ತೇನೆ ಎಂದು ಹೇಳಿದರು. |
| 11. | ವಂದನಾರ್ಪಣೆ | ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಟಿ.ಸುರೇಶ್ ರವರು ಸಭೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕರು, ಸರ್ವ ಸದಸ್ಯರು ಹಾಗೂ ಸಂಸ್ಥೆಯ ಬೋಧಕ–ಬೋಧಕೇತರ ವರ್ಗದವರಿಗೆಲ್ಲ ವಂದನಾರ್ಪಣೆ ಮಾಡಿದರು. |
| 12. | ರಾಷ್ಟ್ರಗೀತೆ | ರಾಷ್ಟ್ರಗೀತೆಯನ್ನು ವಾರ್ಷಿಕ ಮಹಾಸಭೆಯ ಸರ್ವರೂ ಹಾಡುವುದರ ಮೂಲಕ ಸಭೆಯನ್ನ ಮುಕ್ತಾಯಗೊಳಿಸಲಾಯಿತು. |

ತಾ॥ 19.07.2009

ಸ್ಥಳ : ಗ್ರಾಮಭಾರತಿ ವಿದ್ಯಾಸಂಸ್ಥೆ.
ಕೆ.ಆರ್.ಪೇಟೆ.

ಸಹಿ
(ಎಸ್.ಸಿ.ಕಿರಣ್ ಕುಮಾರ್)
19/07/09
ಸಭಾದ್ಯಕ್ಷರು

## ಮಹಾಸಭೆ: 21

**2009–10 ನೇ ಸಾಲಿನ ವಾರ್ಷಿಕ ಮಹಾಸಭೆ** **ತಾ॥ 25.07.2010**

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೆ.ಆರ್.ಪೇಟೆ ಈ ಸಂಸ್ಥೆಯ 2009–10 ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ॥ 25.07.2010 ಭಾನುವಾರ ಬೆಳಿಗ್ಗೆ 11:00 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಿ, ಈ ಸಭೆಯಲ್ಲಿನ ಮೀಟಿಂಗ್ ನಡವಳಿಕೆಗಳು.

ಹಾಜರಿ :– ಹಾಜರಿಯಾಗಿದ್ದ ಸದಸ್ಯರ ಸಹಿಯನ್ನು ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಸಂಸ್ಥೆಯ ಬೋಧಕ ವೃಂದದವರಾದ ಲೀಲಾವತಿ, ಮಂಜುಳಾ, ಹಿತೈಷಿಣಿರವರು ದೇವತಾ ಪ್ರಾರ್ಥನೆ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ಸಂಸ್ಥೆಯ ಬಿ.ಇಡಿ. ವಿಭಾಗದ ಪ್ರಾಚಾರ್ಯರಾದಂತಹ ಪಿ.ಸುರೇಶ್ ರವರು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಯವರು, ನಿರ್ದೇಶಕರುಗಳು, ಸಂಸ್ಥೆಯ ಎಲ್ಲಾ ಬೋಧಕ, ಬೋಧಕೇತರ ವರ್ಗದವರಿಗೆಲ್ಲ ಸ್ವಾಗತ ಕೋರಿದರು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು. | 2009–10ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಪಿ.ಯು.ಸಿ ವಿಭಾಗದ ಪ್ರಾಚಾರ್ಯರಾದ ನಾಗರಾಜೇಗೌಡರು ಓದಿ ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡಲಾಯಿತು. |
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು. | ಹಿಂದಿನ ಮಹಾಸಭೆಯ ವರದಿಯನ್ನು ಡಿ.ಇಡಿ. ಪ್ರಾಚಾರ್ಯರಾದ ಕೆ.ಎನ್.ಚಂದ್ರಮೋಹನ್ ರವರು ಓದಿದರು. ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಿದ್ದು ರೆಕಾರ್ಡ್ ಮಾಡಲಾಯಿತು. |

| | | |
|---|---|---|
| 5. | ಸಂಘದ ವರದಿಯನ್ನ ಮಂಡಿಸುವುದು. | 2009–10ನೇ ಸಾಲಿನಲ್ಲಿ ಸಂಸ್ಥೆಯು ಕೈಗೊಂಡು, ಮಾಡಿರುವ ಕಾರ್ಯಕ್ರಮಗಳನ್ನು ಡಿ.ಇಡಿ. ಪ್ರಾಚಾರ್ಯರಾದ ಚಂದ್ರಮೋಹನ್.ಕೆ.ಎನ್.ರವರು ಓದಿದರು ಜೊತೆ ಜೊತೆಗೆ ಸಾಧನಾ ಕೆಲಸಗಳ ಸ್ಟಿಲ್ ಫೋಟೋಗಳನ್ನ ಬಿತ್ತರಿಸಲಾಯಿತು ಸಭೆಯ ವೀಕ್ಷಿಸಿ, ಕೇಳಿ ಒಪ್ಪಿಗೆ ಸೂಚಿಸಿದ್ದರಿಂದ ರೆಕಾರ್ಡ್ ಮಾಡಲಾಯಿತು. |
| 6. | 2009–10ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸು ವುದು. | 2009–10ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಮಂಡಿಸಿದರು ಜೊತೆ ಜೊತೆಯಾಗಿ ಪರದೆ ಮೇಲೆ ತೋರಿಸಲಾಯಿತು. ಸದಸ್ಯರಾದ ರಾಮೇಗೌಡರು ಲೆಕ್ಕಪರಿಶೋಧಕರ ವರದಿಯನ್ನ ಕನ್ನಡದಲ್ಲಿ ಮುದ್ರಿಸಿಕೊಟ್ಟರೆ ಸೂಕ್ತ ಎನ್ನಲು ಅಧ್ಯಕ್ಷರು ಮುಂದಿನ ಸಾಲಿನಿಂದ ಪ್ರಯತ್ನಿಸೋಣ ಎಂದು ಹೇಳಿದರು. ಸದಸ್ಯರಾದ ಕೆ ಆರ್ ಪುಟ್ಟಸ್ವಾಮಿಯವರು ಬ್ಯಾಲೆನ್ಸ್ ಶೀಟ್ ಪೂರ್ಣ ಮಾಹಿತಿ ಆಹ್ವಾನ ಪತ್ರಿಕೆಯಲ್ಲಿ ಇಲ್ಲವಲ್ಲ ಎಂದು ಕೇಳಲು, ಅದಕ್ಕೆ ಉತ್ತರಿಸಿದ ಅಧ್ಯಕ್ಷರು ಎಲ್ಲಾ ವಿವರವನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಲು ತೊಂದರೆಯಾಗುತ್ತದೆ. ಆಡಿಟ್ ವರದಿಯ ಮಾಹಿತಿ ಬೇಕಾದವರು ಸಂಸ್ಥೆಯಲ್ಲಿ ನಿರ್ದಿಷ್ಟ ಸಮಯದಲ್ಲಿ ನೇರವಾಗಿ ಬಂದು ಪರಿಶೀಲಿಸಬಹುದೆಂದು ಆಹ್ವಾನ ಪತ್ರಿಕೆಯಲ್ಲಿ ಸೂಚಿಸಲಾಗಿದೆ ಎಂದು ಹೇಳಿದರು. ಸಭೆಯು ಈ ವರದಿಗೆ ಒಪ್ಪಿಗೆ ನೀಡಿದ್ದರಿಂದ ವರದಿಯನ್ನ ರೆಕಾರ್ಡ್ ಮಾಡಲಾಯಿತು. |

| | | |
|---|---|---|
| 7. | 2010–11ನೇ ಸಾಲಿಗೆ ಬಡ್ಜೆಟ್ ಮಂಜೂರು ಮಾಡುವುದು. | ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರು 2010–11ನೇ ಸಾಲಿಗೆ ಮಾಡಿರುವ ಬಡ್ಜೆಟ್ ಮಂಡನೆ ಮಾಡಿದರು.<br>ಈ ಸಂದರ್ಭದಲ್ಲಿ ಸದಸ್ಯರಾದ ಕೆ.ಆರ್.ಪುಟ್ಟಸ್ವಾಮಿ ರವರು ಈ ಬಜೆಟ್ ನಿಮ್ಮ ರೆವೆನ್ಯೂ ಆಧಾರದ ಮೇಲೆ ಕೋರಲಾಗಿದೆಯೆ ಎಂದು ಕೇಳಲು ಅಧ್ಯಕ್ಷರು ಕೆಲವು ವೆಚ್ಚಗಳನ್ನು ನಾವು ರೆವೆನ್ಯೂ ಮೇಲೆ ಆಧರಿಸಿ ಕೋರಿರುತ್ತೇವೆ ಸಂಸ್ಥೆಗೆ ಮೇಲಿನಿಂದ ಬರುವ ಆರ್ಥಿಕ ವಿಷಯಗಳಿಗೆ ಅನಿವಾರ್ಯ ಖರ್ಚಿನ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು. |

**2010–11ನೇ ಸಾಲಿನ ಮಂಜೂರಾತಿಗಾಗಿ ಬಡ್ಜೆಟ್ ವಿವರ**

| | | | |
|---|---|---|---|
| 1. | ಸಂಸ್ಥೆಯ ನೌಕರರ ಸಂಬಳ | : | 25,00,000–00 |
| 2. | ವಿದ್ಯುಚ್ಛಕ್ತಿ ಶುಲ್ಕ | : | 50,000–00 |
| 3. | ವಾರ್ಷಿಕ ಮಹಾಸಭೆಯ ಖರ್ಚು | : | 50,000–00 |
| 4. | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | : | 1,00,000–00 |
| 5. | ಪ್ರಯಾಣ ಭತ್ಯೆ | : | 1,00,000–00 |
| 6. | ಅತಿಥಿ ಸತ್ಕಾರ | : | 1,50,000–00 |
| 7. | ಅಂಚೆ ವೆಚ್ಚ | : | 5,000–00 |
| 8. | ಅನಿರೀಕ್ಷಿತ ವೆಚ್ಚ | : | 50,000–00 |
| 9. | ಜಾಹೀರಾತು ವೆಚ್ಚ | : | 25,000–00 |
| 10. | ಫರ್ನಿಚರ್ ವೆಚ್ಚ | : | 2,00,000–00 |
| 11. | ಸಾದಿಲ್ವಾರ್ ಮತ್ತು ಲೇಖನ ಸಾಮಗ್ರಿಗಳು | : | 35,000–00 |
| 12. | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣಾ ವೆಚ್ಚ | : | 12,00,000–00 |
| 13. | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | : | 14,50,000–00 |
| 14. | ಸ್ಥಿರ ನಿಧಿಗಾಗಿ | : | –––––– |

ಒಟ್ಟು : 59,15,000–00

ಈ ಬಜೆಟ್ಟನ್ನು ಸರ್ವ ಸದಸ್ಯರು ಒಪ್ಪಿಗೆ ಸೂಚಿಸಲು ರೆಕಾರ್ಡ್ ಮಾಡಲಾಯಿತು.

| | | |
|---|---|---|
| 8. | 2010–2011 ನೇ ಸಾಲಿಗೆ ಆಡಳಿತ ಮಂಡಳಿ ರಚನೆ. | 2010–11ನೇ ಸಾಲಿಗೆ ಆಡಳಿತ ಮಂಡಳಿ ಸದಸ್ಯರ ಹೆಸರು ಹಾಗೂ ಪದನಾಮಗಳನ್ನ ಕಾರ್ಯದರ್ಶಿಯವರಾದ ಕೆ.ಜಿ.ಹುಚ್ಚೇಗೌಡರು ಮಂಡಿಸಿದರು. |

| ಹೆಸರು | | ಪದನಾಮ |
|---|---|---|
| 1. ಶ್ರೀ ಎಸ್.ಸಿ.ಕಿರಣ್ ಕುಮಾರ್ | – | ಅಧ್ಯಕ್ಷರು |
| 2. ಶ್ರೀ ಕೆ.ಜಿ.ಹುಚ್ಚೇಗೌಡರು | – | ಕಾರ್ಯದರ್ಶಿ |
| 3. ಶ್ರೀ ಎ.ಎಂ.ನಂಜುಂಡೇಗೌಡರು | – | ಖಜಾಂಚಿ |
| 4. ಶ್ರೀ ಬಿ.ಎಸ್.ಲಕ್ಷ್ಮೀಪತಿಜೋಯಿಸರು | – | ನಿರ್ದೇಶಕರು |
| 5. ಶ್ರೀ ಎಲ್.ಜಿ.ನಾರಾಯಣಗೌಡರು | – | ನಿರ್ದೇಶಕರು |
| 6. ಶ್ರೀ ಎಸ್.ಎಸ್.ಶಾಂತಹೃದಯರವರು | – | ನಿರ್ದೇಶಕರು |
| 7. ಶ್ರೀ ಎಸ್.ಸಿ.ರಾಮಲಿಂಗೇಗೌಡರು | – | ನಿರ್ದೇಶಕರು |
| 8. ಶ್ರೀ ಎಸ್.ಕೆ.ರಂಗಸ್ವಾಮಿರವರು | – | ನಿರ್ದೇಶಕರು |
| 9. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು | – | ನಿರ್ದೇಶಕರು |

ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದ್ದರಿಂದ ರೆಕಾರ್ಡ್ ಮಾಡಲಾಯಿತು.

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆಗಳನ್ನು ನೀಡಲು ಅವಕಾಶ. | ಸದಸ್ಯರಾದ ಕೆ.ಆರ್.ಪುಟ್ಟಸ್ವಾಮಿಯವರು ಮಾತನಾಡಿ ಈ ಗ್ರಾಮಭಾರತಿ ಸಂಸ್ಥೆ ತಾಲೂಕಿನಲ್ಲಿ ಖಾಸಗಿ ಕ್ಷೇತ್ರದಲ್ಲಿ ಹೆಚ್ಚು ಹೆಸರು ಮಾಡಿದೆ. ಹಿಂದಿನ ಅಧ್ಯಕ್ಷರಾದ ಎಸ್.ಸಿ.ಚಿಕ್ಕಣ್ಣಗೌಡರು ನಾನು ಸಮಕಾಲೀನರು. ಅವರ ಶ್ರಮದ ಫಲವೇ ಈ ಗ್ರಾಮಭಾರತಿ ಎಂಬ ಹೆಮ್ಮರ, ಅವರ ಪುತ್ರರಾದ ಎಸ್.ಸಿ.ಕಿರಣ್ ಕುಮಾರ್ ರವರು ಸಹ ಅವರ ಹಾದಿಯಲ್ಲಿ ಮುನ್ನಡೆಯುತ್ತಿರುವುದನ್ನ |

| | | |
|---|---|---|
| | | ಸಂಸ್ಥೆಯ ಪ್ರಾರ್ಥನಾ ನಿಯಮ, ಲೈಬ್ರರಿ, ಕಂಪ್ಯೂಟರ್ ವ್ಯವಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪಶ್ಚಿಮ ಭಾಗದ ಕಾಂಪೌಂಡ್ ನಿರ್ಮಾಣದ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದರು. ಪದವಿ ಕೋರ್ಸ್‌ನ್ನ ತರಲು ತಮ್ಮ ಅಭಿಪ್ರಾಯ ಸೂಚಿಸಿದರು. ಬಿ.ಇಡಿ. ಪ್ರಾಚಾರ್ಯರಾದ ಪಿ.ಸುರೇಶ್ ರವರು ಮಾತನಾಡಿ ಸಂಸ್ಥೆಯ ಆಡಳಿತ ಮಂಡಳಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಾಚಾರ್ಯರಾದ ಕೆ.ಎನ್. ಚಂದ್ರಮೋಹನ್ ರವರು ಮಾತನಾಡಿ ನನ್ನಂತ ಹತ್ತಾರು ಜನಕ್ಕೆ ಜೀವನ ನೀಡಿದ ಈ ಸಂಸ್ಥೆಯ ನೇತಾರ ಎಸ್.ಸಿ.ಚಿಕ್ಕಣ್ಣಗೌಡರನ್ನು ಸ್ಮರಿಸಿಕೊಂಡರು ಹಾಗೂ ಹಿಂದಿನ ಅಧ್ಯಕ್ಷರಾದ ಎಸ್.ಸಿ.ಕಿರಣ್ ಕುಮಾರ್‌ರವರಲ್ಲಿ ಸಂಸ್ಥೆಯ ಎಲ್ಲಾ ಸಿಬ್ಬಂದಿಗೆ ಪ್ರತಿ ವರ್ಷ ಸಾಧ್ಯವಾದಷ್ಟು ವೇತನ ಹೆಚ್ಚಿಸುವ ಬೇಡಿಕೆ ಇಟ್ಟರು. ಬಿ.ಇಡಿ. ಉಪನ್ಯಾಸಕರಾದ ಮಂಜುನಾಥ್ ರವರು ಮಾತನಾಡಿ ನಮಗೆ ಒಂದು ಪ್ರತ್ಯೇಕ ಉಪನ್ಯಾಸಕರ ಕೊಠಡಿ ಹಾಗೂ ಉಗ್ರಾಣವೊಂದರ ಬೇಡಿಕೆ ಇಟ್ಟರು. ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಸುರೇಶ್ ರವರು ಮಾತನಾಡಿ ಎಸ್.ಎಂ.ಲಿಂಗಪ್ಪನವರಿಂದ ನಾವು ಕಲಿತ ಉತ್ತಮ ಜೀವನ ಶೈಲಿಯನ್ನ ನೆನಪಿಸಿಕೊಂಡರು. ಕೆಲವೊಮ್ಮೆ ಸರ್ಕಾರಿ ಸಂಬಳ ಬಾರದಿದ್ದಾಗ ತಮ್ಮ ಕೈಯಿಂದ ಮುಂಗಡವಾಗಿ ಹಣ ನೀಡುತ್ತಿದ್ದ ಎಸ್.ಎಂ.ಲಿಂಗಪ್ಪನವರ ಸಹಕಾರ ಗುಣಗಳನ್ನು ಸ್ಮರಿಸಿಕೊಂಡರು. ಪ್ರಸ್ತುತ ಅಧ್ಯಕ್ಷರು ಪ್ರತಿ ರಾಷ್ಟ್ರೀಯ ಹಬ್ಬಗಳಲ್ಲೂ ಸಂಸ್ಥೆಯ ಎಲ್ಲಾ ಬೋಧಕ ಮತ್ತು ಬೋಧಕೇತರ ವರ್ಗದವರ ಸಭೆ ಕರೆದು ಅವರ ಸಮಸ್ಯೆ |

| | | |
|---|---|---|
| | | ಆಲಿಸುವ ಗುಣವನ್ನು ಕೊಂಡಾಡಿದರು. ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕರ ಎಸ್.ಬಸವರಾಜಯ್ಯನವರು ಮಾತನಾಡುತ್ತಾ ಬಿ.ಇಡಿ. ಡಿ.ಇಡಿ. ಕೋರ್ಸ್ ತರುವಲ್ಲಿ ಹಿಂದಿನ ಅಧ್ಯಕ್ಷರಾಗಿದ್ದ ಎಸ್.ಸಿ.ಚಿಕ್ಕಣ್ಣಗೌಡರ ಶ್ರಮ ಹಾಗೂ ಸಾಧನೆಯನ್ನ ನೆನಪಿಸಿಕೊಂಡರು. ಜೊತೆಗೆ ಬಿಸಿಯೂಟಕ್ಕೆ ಕೋಣೆಯೊಂದರ ಬೇಡಿಕೆ ಇಟ್ಟರು. ಡಿ.ಇಡಿ. ವಿಭಾಗದ ಉಪನ್ಯಾಸಕರಾದ ಗಂಗಾಧರ್ ರವರು ಮಾತನಾಡಿ ನಾನು ಮೊದಲು ಒಂದೇ ಕೋರ್ಸ್ ಇದ್ದ ಕಡೆ ಕೆಲಸ ಮಾಡುತ್ತಿದ್ದೆ. ಇಲ್ಲಿಗೆ ಬಂದ ಮೇಲೆ ಇಲ್ಲಿರುವ ಹಲವು ವಿಭಾಗಗಳ ಅನುಬಂಧ ನನ್ನಲ್ಲಿ ವ್ಯಕ್ತಿ ವಿಕಸನ ಉಂಟು ಮಾಡಿದೆ ಎಂದು ಹೇಳಿದರು. |
| 10. | ಅಧ್ಯಕ್ಷರ ಭಾಷಣ | ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಸ್ಥೆಯ ಪಶ್ಚಿಮ ಭಾಗದ ಕಾಂಪೌಂಡ್ ನಿರ್ಮಾಣದಲ್ಲಿ ಸ್ಥಳೀಯರೊಂದಿಗೆ ಸಹಮತ ವಹಿಸಿ ನಿರ್ಮಿಸಲಾಗಿದೆ. ಇದಕ್ಕೆ ಕಾರಣ ಸಂಸ್ಥೆ ನಡೆಸುವಲ್ಲಿ ಸ್ಥಳೀಯರೊಂದಿಗೆ ಸೌಹಾರ್ದಯುತ ಸಂಬಂಧ ಬೆಳೆಸಿಕೊಂಡು ಹೋಗುವ ದೃಷ್ಟಿಯಿಂದ ಎಂದು ಹೇಳಿದರು. ಹಾಗೂ ಗುರುತಿನ ಚೀಟಿ ಸದಸ್ಯರಿಗೆ ಕಡ್ಡಾಯ ಮಾಡಿರುವುದನ್ನು ಇನ್ನೂ ಎರಡು ಮೂರು ತಿಂಗಳಲ್ಲಿ ಪರಿಪೂರ್ಣಗೊಳಿಸುತ್ತೇವೆ ಎಂದು ಹೇಳಿದರು. ಕೆ.ಆರ್.ಪುಟ್ಟಸ್ವಾಮಿಯವರ ಪದವಿ ತೆರೆಯುವ ಅನಿಸಿಕೆಗೆ ಕ್ಯಾಂಪಸ್ ಕೊರತೆ ಇದೆ. ಜೊತೆಗೆ ಉಪನ್ಯಾಸಕರ ಕೊರತೆ ಬರುತ್ತೆ ಎಂದು ಹೇಳಿದರು. ಇರುವುದನ್ನ ಉತ್ತಮವಾಗಿ ನಡೆಸಿಕೊಂಡು ಹೋಗಲು ಮುಂದಾಗೋಣ ಎಂದರು. ಬಸವರಾಜಯ್ಯನವರ ಅಡುಗೆಮನೆ ಬೇಡಿಕೆಗೆ ನೀವು ಗ್ಯಾಸ್ ವ್ಯವಸ್ಥೆ |

| | | |
|---|---|---|
| | | ಮಾಡಿಕೊಳ್ಳಿ. ತಕ್ಷಣ ನಾನು ರೂಮ್ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿದರು. ಸಂಬಳದ ವಿಷಯದಲ್ಲಿ ಸಂಸ್ಥೆಯ ಹಣಕಾಸಿನ ಮೂಲವನ್ನು ಆಧರಿಸಿ ನೀಡಲು ಪ್ರಯತ್ನಿಸುತ್ತೇವೆ ಎಂದು ಹೇಳಿದರು. ತಮ್ಮೆಲ್ಲರ ಸಹಕಾರದೊಂದಿಗೆ ಈ ಸಂಸ್ಥೆಯನ್ನು ಉತ್ತಮವಾಗಿ ಮುನ್ನಡೆಸಿಕೊಂಡು ಹೋಗುತ್ತೇನೆ ಎಂದು ಹೇಳಿದರು. |
| 11. | ವಂದನಾರ್ಪಣೆ | ಪ್ರೌಢಶಾಲಾ ವಿಭಾಗದ ಮುಖ್ಯಸ್ಥರಾದ ಎಸ್.ಬಸವರಾಜಯ್ಯನವರು ಸಭೆಯ ಅಧ್ಯಕ್ಷರಿಗೂ, ಕಾರ್ಯಕಾರಿ ಮಂಡಳಿಯವರಿಗೂ, ಸರ್ವ ಸದಸ್ಯರಿಗೂ, ಸಂಸ್ಥೆಯ ಬೋಧಕ–ಬೋಧಕೇತರ ವರ್ಗದವರೆಲ್ಲರಿಗೂ ವಂದನಾರ್ಪಣೆ ಕೋರಿದರು. |
| 12. | ರಾಷ್ಟ್ರಗೀತೆ | ವಾರ್ಷಿಕ ಮಹಾಸಭೆಯ ಸರ್ವರೂ ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸ ಲಾಯಿತು. |

ತಾ॥ 25.7.2010 –ಸಹಿ–

ಸ್ಥಳ ಗ್ರಾಮ ಭಾರತಿ ವಿದ್ಯಾಸಂಸ್ಥೆ (ಎಸ್.ಸಿ.ಕಿರಣ್ ಕುಮಾರ್)

ಕೆ.ಆರ್.ಪೇಟೆ. 25/07/10

# ಮಹಾಸಭೆ: 22

## 2010–11 ನೇ ಸಾಲಿನ ವಾರ್ಷಿಕ ಮಹಾಸಭೆ ತಾ॥ 24.07.2011

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೆ.ಆರ್.ಪೇಟೆ ಈ ಸಂಸ್ಥೆಯ 2010–11 ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ॥ 24.07.2011 ಭಾನುವಾರ ಬೆಳಿಗ್ಗೆ 10:30 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಿ, ಈ ಸಭೆಯಲ್ಲಿನ ಮೀಟಿಂಗ್ ನಡವಳಿಕೆಗಳು.

ಹಾಜರಿ :– ಹಾಜರಿಯಾಗಿದ್ದ ಸದಸ್ಯರ ಸಹಿಯನ್ನು ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಸಂಸ್ಥೆಯ ಬೋಧಕ ವೃಂದದವರಾದ ಶ್ರೀಮತಿ ಲೀಲಾವತಿ, ಮಂಜುಳಾ, ಹಿತೈಷಿಣಿಯವರು ದೇವತಾ ಪ್ರಾರ್ಥನೆ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ಸಂಸ್ಥೆಯ ಬಿ.ಇಡಿ. ವಿಭಾಗದ ಪ್ರಾಚಾರ್ಯರಾದ ಪಿ.ಸುರೇಶ್ ರವರು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕರುಗಳು, ಸರ್ವ ಸದಸ್ಯರುಗಳು ಹಾಗೂ ಸಭೆಯಲ್ಲಿದ್ದ ಎಲ್ಲರಿಗೂ ಸ್ವಾಗತವನ್ನ ಕೋರಿದರು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು. | ಸರ್ವ ಸದಸ್ಯರ 2010–11ನೇ ಸಾಲಿನ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಪಿ.ಯು.ಸಿ. ವಿಭಾಗದ ಪ್ರಾಚಾರ್ಯರಾದ ನಾಗರಾಜೇಗೌಡರು ಓದಿ ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡಲಾಯಿತು. |
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು. | ಹಿಂದಿನ ಮಹಾಸಭೆಯ ವರದಿಯನ್ನ ಡಿ.ಇಡಿ. ಪ್ರಾಚಾರ್ಯರಾದ ಕೆ.ಎನ್.ಚಂದ್ರಮೋಹನ್ ರವರು ಓದಿ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಲಾಯಿತು. |

| | | |
|---|---|---|
| 5. | ಸಂಘದ ವರದಿಯನ್ನ ಮಂಡಿಸುವುದು. | 2010–11ನೇ ಸಾಲಿನಲ್ಲಿ ಸಂಸ್ಥೆಯು ಕೈಗೊಂಡು ಮಾಡಿರುವ ಕಾರ್ಯಕ್ರಮಗಳನ್ನ ಡಿ.ಇಡಿ. ಪ್ರಾಚಾರ್ಯರಾದ ಕೆ.ಎನ್.ಚಂದ್ರಮೋಹನ್ ರವರು ಓದಿದರು. ಜೊತೆಜೊತೆಗೆ ಸಾಧನ ಕೆಲಸಗಳ ವಿಡಿಯೋ ಚಿತ್ರಣಗಳನ್ನ ಬಿತ್ತರಿಸಲಾಯಿತು. ಸಭೆಯು ಸಂಸ್ಥೆಯ ಸಾಧನ ವರದಿಯನ್ನು ಓದಿ–ಕೇಳಿ–ನೋಡಿ ಒಪ್ಪಿಗೆ ಸೂಚಿಸಿದ್ದರಿಂದ ರೆಕಾರ್ಡ್ ಮಾಡಲಾಯಿತು. |
| 6. | 2010–11ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಪರಿಶೀಲಿಸಿ ಅಂಗೀಕರಿಸು ವುದು. | 2010–11ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಮಂಡಿಸಿದರು. ಜೊತೆ ಜೊತೆಗೆ ಪರದೆ ಮೇಲೆಯೂ ತೋರಿಸಲಾಯಿತು. ಈ ಸಂದರ್ಭದಲ್ಲಿ ಸದಸ್ಯರಾದ ಕೆ.ಆರ್.ಪುಟ್ಟಸ್ವಾಮಿಯವರು ಸರ್ಕಾರದ ಗ್ರಾಂಟ್ಸ್ ಪಡೆಯುತ್ತಿರುವ ಪ್ರೌಢಶಾಲಾ ವಿಭಾಗದ ವೇತನ ಮೊತ್ತವನ್ನ ಇದರಲ್ಲಿ ಸೇರಿಸಬಹುದಿತ್ತಲ್ಲ ಎಂಬ ಪ್ರಶ್ನೆಗೆ ಅಧ್ಯಕ್ಷರು ಸರ್ಕಾರದಿಂದ ಬರುವ ಆ ಸಂಬಳ ಆಯಾ ಶಿಕ್ಷಕರ ವೈಯಕ್ತಿಕ ಖಾತೆಗೆ ಬರುವುದರಿಂದ ಇಲ್ಲಿ ಸೇರಿಸಲು ಬರುವುದಿಲ್ಲ ಎಂದು ಹೇಳಿದರು. ಹಾಗೆ ಪಿ.ಎಫ್. ಕಟ್ಟುವ ಹಣ ಆಯಾ ಶಿಕ್ಷಕರು ಮದ್ಯ ಶಾಲೆ ಬಿಟ್ಟರೆ ಸಂಸ್ಥೆಗೆ ಸೇರುತ್ತದೆಯೆ? ಎಂಬ ಪ್ರಶ್ನೆಗೆ ಅಧ್ಯಕ್ಷರು ಯಾವುದೇ ನೌಕರರಿಗೆ ಕಟ್ಟುವ ಹಣ ಅವರವರ ವೈಯಕ್ತಿಕ ಖಾತೆಗೆ ಸೇರುತ್ತೆ ಅವರು ಕೆಲಸ ಬಿಟ್ಟರು ಅದು ಅವರಿಗೆ ಸೇರುತ್ತದೆ ಎಂದು ತಿಳಿಸಿದರು. ಸಭೆಯು ಈ ವರದಿಗೆ ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದರಿಂದ ರೆಕಾರ್ಡ್ ಮಾಡಲಾಯಿತು. |

| | | |
|---|---|---|
| 7. | 2011–12ನೇ ಸಾಲಿಗೆ ಬಜೆಟ್ ಮಂಜೂರು ಮಾಡುವುದು. | ಸಂಸ್ಥೆಯ ಕಾರ್ಯದರ್ಶಿಯವರಾದ ಕೆ.ಜಿ.ಹುಚ್ಚೇಗೌಡರ ಪರವಾಗಿ ಅವರ ಅನುಮತಿ ಪಡೆದು ಪ್ರೌಢಶಾಲಾ ಶಿಕ್ಷಕರಾದ ಹೆಚ್‌ಎಸ್ ಕೃಷ್ಣಾರ್ವರು 2011–12 ನೇ ಸಾಲಿಗೆ ಬಜೆಟ್ ಮಂಡನೆ ಮಾಡಿದರು. |

| ಕ್ರ.ಸಂ. | ವಿವರ | 2010–11ನೇ ಸಾಲಿಗೆ ಮಂಜೂರಾಗಿರುವುದು | 2010–11ನೇ ಸಾಲಿಗೆ ಖರ್ಚಾಗಿರುವುದು | 2011–12ನೇ ಸಾಲಿಗೆ ಮಂಜೂರಾತಿ ಕೋರಿರುವುದು. |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 25,00,000 | 19,16,040 | 25,00,000 |
| 2 | ವಿದ್ಯುಚ್ಛಕ್ತಿ ಶುಲ್ಕ | 50,000 | 28,331 | 50.000 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50.000 | 32,455 | 50,000 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 1,00,000 | 27,670 | 25,000 |
| 5 | ಪ್ರಯಾಣ ಭತ್ಯೆ | 1,00,000 | 14,788 | 50,000 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 1,50,000 | 98,857 | 1,50,000 |
| 7 | ಆಂಚೆ ವೆಚ್ಚ | 5,000 | ---- | 5,000 |
| 8 | ಅನಿರೀಕ್ಷಿತ ವೆಚ್ಚ | 50,000 | ---- | 50,00 |
| 9 | ಜಾಹಿರಾತು ವೆಚ್ಚ | 25,000 | 10,910 | 25,000 |
| 10 | ಫರ್ನೀಚರ್ ವೆಚ್ಚ | 2,00,000 | 1,87,500 | 1,00,000 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 35,000 | 34,583 | 50,000 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 12,00,000 | 9,65,974 | 18,00,000 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 14,50,000 | 4,49,596 | 12,50,000 |
| 14 | ಸ್ಥಿರ ನಿಧಿಗಾಗಿ | ----- | 15,000 | 50,000 |
| | **ಒಟ್ಟು** | **59,15,000** | **40,82,081** | **61,55,000** |

| | | |
|---|---|---|
| | | ಈ ಬಡ್ಜೆಟ್ ಗೆ ಸರ್ವ ಸದಸ್ಯರು ಒಪ್ಪಿಗೆ ನೀಡಿದ್ದರಿಂದ ರೆಕಾರ್ಡ್ ಮಾಡಲಾಯಿತು. |
| 8. | 2011–12ನೇ ಸಾಲಿಗೆ ಆಡಳಿತ ಮಂಡಳಿ ರಚನೆ. | 2011–12ನೇ ಸಾಲಿಗೆ ಆಡಳಿತ ಮಂಡಳಿ ಸದಸ್ಯರ ಹೆಸರು ಹಾಗೂ ಪದನಾಮಗಳನ್ನ ಕಾರ್ಯದರ್ಶಿ ಕೆ.ಜಿ.ಹುಚ್ಚೇಗೌಡರ ಪರವಾಗಿ ಹೆಚ್.ಎಸ್.ಕೃಷ್ಣರವರು ಮಂಡಿಸಿದರು. |

| ಹೆಸರು | ಪಧನಾಮ |
|---|---|
| 1. ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು | ಅಧ್ಯಕ್ಷರು |
| 2. ಶ್ರೀ ಕೆ.ಜಿ.ಹುಚ್ಚೇಗೌಡರು | ಕಾರ್ಯದರ್ಶಿಗಳು |

3. ಶ್ರೀ ಎ.ಎಂ.ನಂಜುಂಡೇಗೌಡರು ನಿರ್ದೇಶಕರು

4. ಶ್ರೀ ಬಿ.ಎಸ್.ಲಕ್ಷ್ಮೀಪತಿ ಜೋಯಿಸರು ನಿರ್ದೇಶಕರು

5. ಶ್ರೀ ಎಲ್.ಜಿ.ನಾರಾಯಣ ಗೌಡರು ನಿರ್ದೇಶಕರು

6. ಶ್ರೀ ಎಸ್.ಎಸ್.ಶಾಂತಹೃದಯ ರವರು ನಿರ್ದೇಶಕರು

7. ಶ್ರೀ ಎಸ್.ಸಿ.ರಾಮಲಿಂಗೇಗೌಡರು ನಿರ್ದೇಶಕರು

8. ಶ್ರೀ ಎಸ್.ಕೆ.ರಂಗಸ್ವಾಮಿಯವರು ನಿರ್ದೇಶಕರು

9. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು ನಿರ್ದೇಶಕರು

ಈ ಮಂಡಳಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದ್ದರಿಂದ ರೆಕಾರ್ಡ್ ಮಾಡಲಾಯಿತು.

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆ ನೀಡಲು ಅವಕಾಶ. | ಸದಸ್ಯರಾದ ನಂಜಪ್ಪನವರು ಮಾತನಾಡಿ ಸಂಸ್ಥೆಯ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಗುರುತಿನ ಚೀಟಿ ವಿತರಿಸಿದ ಕ್ರಮ ಕ್ರಮಬದ್ಧವಾಗಿದೆ ಎಂದು ಹೇಳಿದರು. ವಿಜ್ಞಾನ ವಿಭಾಗವನ್ನ ಮುಚ್ಚಬಾರದಾಗಿತ್ತು ಎಂದು ಹೇಳಿದರು. ಮತ್ತೊಬ್ಬ ಸದಸ್ಯರಾದ ರಾಮ್ ಪ್ರಸಾದ್ ರವರು ಮಾತನಾಡಿ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣದ ಜೊತೆಗೆ ಮೌಲ್ಯಗಳಿಗೆ ಆದ್ಯತೆ ನೀಡಬೇಕು ಹಾಗೆ ವರ್ಷಕ್ಕೊಮ್ಮೆಯಾದರೂ ಒಂದು ಆಧ್ಯಾತ್ಮಿಕ ಶಿಬಿರವನ್ನ ನಡೆಸುವುದು ಸೂಕ್ತ ಎಂದು ಹೇಳಿದರು. ಹಾಗೆ ಸದಸ್ಯರಾದ ಕೆ.ಆರ್.ಪುಟ್ಟಸ್ವಾಮಿಯವರು ಮಾತನಾಡಿ ಶಿಕ್ಷಕರ ಹಿತದೃಷ್ಟಿಯಿಂದ ಅವರಿಗೆ ಎಸ್.ಆರ್. ಹಾಗೂ ಸೂಕ್ತ ವೇತನ ನೀಡುವುದು ಸೂಕ್ತ ಜೊತೆಗೆ ಈ ಸ್ಪರ್ಧಾಯುಗದಲ್ಲಿ ಆಂಗ್ಲಭಾಷೆ ಕಲಿಕೆ ಅವಶ್ಯ ಭೋದಕ ವೃಂದಕ್ಕೆ ಇಲ್ಲಿರುವವರಿಂದಲೆ ತರಬೇತಿ ನೀಡುವುದು ಸೂಕ್ತ ಹಾಗೆ ಶಿಕ್ಷಕರಿಗೆ ಓರಿಯಂಟಲ್ ಕೋರ್ಸ್ಗೆ ಅನುಮತಿ ಕೊಡಿ ಜೊತೆಗೆ ನುರಿತ ವ್ಯಕ್ತಿಗಳನ್ನ ಕರೆಸಿ ಸಂಸ್ಥೆಯಲ್ಲಿ ಕಾರ್ಯಗಾರ ನಡೆಸಿ ಈ |

| | | |
|---|---|---|
| | | ಕಾರ್ಯಗಳನ್ನ ಹಮ್ಮಿಕೊಂಡಲ್ಲಿ ಈ ಸಂಸ್ಥೆ ಇನ್ನೂ ಉಜ್ವಲ ಮಟ್ಟಕ್ಕೆ ಏರುತ್ತೆ ಎಂದು ಹೇಳಿದರು. |
| 10. | ಅಧ್ಯಕ್ಷರ ಭಾಷಣ | ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಾತನಾಡುತ್ತಾ ನಿರ್ದೇಶಕರಾದ ಎಸ್.ಎಸ್.ಶಾಂತಹೃದಯರವರು ಇನ್ನೂ ಕೆಲವು ಅಜೀವ ಸದಸ್ಯರಿಗೆ ಗುರುತಿನ ಚೀಟಿ ಪಡೆಯಲು ಸೂಕ್ತ ಕಾಲಾವಕಾಶ ಬೇಕಿತ್ತು ಎಂಬ ಪ್ರಶ್ನೆಗೆ ಅಜೀವ ಸದಸ್ಯರನ್ನ ಗುರುತಿನ ಚೀಟಿ ಪಡೆದಿಲ್ಲ ಎಂಬ ಕಾರಣಕ್ಕೆ ಕೈ ಬಿಡುವಂತಿಲ್ಲ ಅವರು ಸೂಕ್ತ ಕಾರಣ ನೀಡಿ ಗುರುತಿನ ಚೀಟಿಗೆ ಬೇಡಿಕೆ ಇತ್ತು ಪತ್ರ ಬರೆದರೆ ಮುಂದಿನ ವಾರ್ಷಿಕ ಸಭೆಯ ನಂತರ ಬರುವ ಹೊಸ ಕಾರ್ಯಕಾರಿ ಮಂಡಳಿ ಪರಿಶೀಲಿಸಿ ಅವರಿಗೆ ಗುರುತಿನ ಚೀಟಿ ನೀಡಬೇಕಾಗುತ್ತದೆ ಎಂದು ಹೇಳಿದರು. ಇದೇ ರೀತಿ ಕೆ.ಆರ್.ಪುಟ್ಟಸ್ವಾಮಿಯವರು ಸದಸ್ಯರ ಕೊರತೆ ಕಾಣುತ್ತಿದೆ ಎನ್ನಲು ಹೆಚ್ಚಿನ ಸದಸ್ಯರನ್ನ ಗುರುತಿನ ಚೀಟಿಗೆ ಆಹ್ವಾನಿಸಲು ನಾವು ಎಲ್ಲಾ ರೀತಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು. ಇವರು ಬೋಧಕ ಬೋಧಕೇತರ ವೃಂದದವರಿಗೆ ಎಸ್.ಆರ್. ವ್ಯವಸ್ಥೆ ಇರಲಿ ಎಂಬ ಪ್ರಶ್ನೆಗೆ ಎಸ್.ಆರ್. ವ್ಯವಸ್ಥೆ ಮಾಡಿಕೊಂಡು ಬಂದಿದ್ದೇವೆ ಎಂದು ಉತ್ತರಿಸಿದರು. ಸದಸ್ಯರಾದ ರಾಂಪ್ರಸಾದ್ ರವರ ಆಧ್ಯಾತ್ಮಿಕ ಶಿಬಿರ ವಿಚಾರದ ಬಗ್ಗೆ ಹೇಳುತ್ತಾ ನಮಗೂ ಅದರಲ್ಲಿ ಹೆಚ್ಚು ಆಸಕ್ತಿ ಇದೆ ಅದನ್ನ ಹಮ್ಮಿಕೊಳ್ಳೋಣ ಎಂದು ಹೇಳಿದರು. ಮತ್ತೊಬ್ಬ ಸದಸ್ಯರಾದ ನಂಜಪ್ಪನವರು ಪಿ.ಯು.ಸಿ ವಿಭಾಗದ ವಿಜ್ಞಾನ ವಿಭಾಗವನ್ನು ಮುಚ್ಚಬಾರದಿತ್ತು ಎಂಬ ಪ್ರಶ್ನೆಗೆ ಪ್ರಸ್ತುತ ಸಾಲಿನಲ್ಲಿ ತಾಲೂಕಿನಲ್ಲಿ ನಾಲ್ಕು ವಿಜ್ಞಾನ ವಿಭಾಗಗಳನ್ನ ಸರ್ಕಾರ ತೆರೆದಿದ್ದರಿಂದ ನಮಗೆ ಉಪನ್ಯಾಸಕರ ಕೊರತೆ ಹಾಗೂ ಮಕ್ಕಳ ದಾಖಲಾತಿ ಕೊರತೆ ಉಂಟಾದ್ದರಿಂದ ಜೊತೆಗೆ ವಿಜ್ಞಾನ ವಿಭಾಗ ನಿರ್ವಹಣೆಗೆ ಹಣದ ವೆಚ್ಚ ಜಾಸ್ತಿಯಾದ್ದರಿಂದ ಪ್ರಸ್ತುತ ಸಾಲಿನಲ್ಲಿ ನಿಲ್ಲಿಸಲಾಗಿದೆ. ಮುಂದೆ ಸೂಕ್ತ ಸಂದರ್ಭ ಒದಗಿದಲ್ಲಿ ಮತ್ತೆ ಪ್ರಾರಂಭಿಸಲು ಪ್ರಯತ್ನಿಸೋಣ ಎಂದು ಹೇಳಿದರು. ಹಾಗೆ ನಂಜಪ್ಪನವರು ಈಜುಕೊಳ ಅಪಾಯದಲ್ಲಿದೆ ಎಂಬ ಪ್ರಶ್ನೆಗೆ ಅದು ಕೇವಲ 2 ರಿಂದ 3 ಅಡಿ ಇರುವ ಮಕ್ಕಳ ಕೊಳ ಜೊತೆಗೆ ಅಲ್ಲಿ ಮಕ್ಕಳು ಆಟವಾಡಬೇಕಾದಲ್ಲಿ ಆ ಮಕ್ಕಳ ಪೋಷಕರೇ |

| | | |
|---|---|---|
| | | ಆಡಿಸಬೇಕು ಆ ರೀತಿ ನಿರ್ದೇಶನ ನೀಡಿರುವುದರಿಂದ ತೊಂದರೆ ಇಲ್ಲ ಎಂದು ತಿಳಿಸಿದರು. ಜೊತೆಗೆ ಪೂರ್ವ ಪ್ರಾಥಮಿಕ ಹಂತಕ್ಕೆ 27 ಮಕ್ಕಳು ಹಿ. ಪ್ರಾ. ಹಂತಕ್ಕೆ 40 ಮಕ್ಕಳು ಪ್ರೌಢ ಹಂತಕ್ಕೆ ತರಗತಿಗೆ 50 ಮಕ್ಕಳು ಹೀಗೆ ನಿಗದಿಗೊಳಿಸಿ ಕಡಿಮೆ ಸಂಖ್ಯೆಯ ಮಕ್ಕಳಿಗೆ ಉತ್ತಮ ಮಟ್ಟದಲ್ಲಿ ಶಿಕ್ಷಣವನ್ನ ನೀಡಲು ಶ್ರಮಿಸೋಣ ಎಂದು ಹೇಳಿದರು. ಹೀಗೆ ಸಂಸ್ಥೆ ಉತ್ತಮ ಶೈಕ್ಷಣಿಕ ಮಟ್ಟವನ್ನ ಕಾಯ್ದುಕೊಂಡು ಮುಂದೆ ಸಾಗಲು ತಮ್ಮೆಲ್ಲರ ಸಹಕಾರ ಬಯಸುತ್ತೇನೆ ಎಂದು ಹೇಳಿದರು. |
| 11. | ವಂದನಾರ್ಪಣೆ | ಪ್ರೌಢಶಾಲಾ ವಿಭಾಗದ ಎಸ್.ಬಸವರಾಜಯ್ಯರವರು ಸಂಸ್ಥೆಯ ಅಧ್ಯಕ್ಷರು, ನಿರ್ದೇಶಕರುಗಳು, ಸರ್ವ ಸದಸ್ಯರು ಹಾಗೂ ಸಂಸ್ಥೆಯ ಬೋಧಕ ಬೋಧಕೇತರ ವೃಂದದವರೆಲ್ಲರಿಗೂ ವಂದನಾರ್ಪಣೆ ಮಾಡಿದರು. |
| 12. | ರಾಷ್ಟ್ರಗೀತೆ | ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡಿದ್ದ ಸರ್ವರೂ ರಾಷ್ಟ್ರಗೀತೆಯನ್ನ ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ತಾ॥ 24.7.2011 —ಸಹಿ—

ಸ್ಥಳ ಗ್ರಾಮ ಭಾರತಿ ವಿದ್ಯಾಸಂಸ್ಥೆ (ಎಸ್.ಸಿ.ಕಿರಣ್ ಕುಮಾರ್)

ಕೆ.ಆರ್.ಪೇಟೆ. 24/07/11

## ಮಹಾಸಭೆ: 23

**2011–12 ನೇ ಸಾಲಿನ ವಾರ್ಷಿಕ ಮಹಾಸಭೆ** **ತಾ॥ 29.07.12**

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೆ.ಆರ್.ಪೇಟೆ ಈ ಸಂಸ್ಥೆಯ 2011–12 ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ॥ 29.07.12 ಭಾನುವಾರ ಮದ್ಯಾನ್ಹ 2:00 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಿ, ಈ ಸಭೆಯಲ್ಲಿನ ಮೀಟಿಂಗ್ ನಡವಳಿಕೆಗಳು.

ಹಾಜರಿ :– ಹಾಜರಿಯಾಗಿದ್ದ ಸದಸ್ಯರ ಸಹಿಯನ್ನು ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯನಿ ಶ್ರೀಮತಿ ಲೀಲಾವತಿ ಮತ್ತು ಸಹಶಿಕ್ಷಕಿಯರು ದೇವತಾ ಪ್ರಾರ್ಥನೆ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ಸಂಸ್ಥೆಯ ಬಿ.ಇಡಿ. ವಿಭಾಗದ ಪ್ರಾಚಾರ್ಯರಾದ ಪಿ.ಸುರೇಶ್ ರವರು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ, ನಿರ್ದೇಶಕರುಗಳು ಹಾಗೂ ಸರ್ವ ಸದಸ್ಯರುಗಳನ್ನ ಹಾಗೂ ಸಂಸ್ಥೆಯ ಬೋಧಕ–ಬೋಧಕೇತರ ವರ್ಗದವರೆಲ್ಲರಿಗೂ ಸ್ವಾಗತವನ್ನು ಕೋರಿದರು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವುದು. | 2011–12ನೇ ಸಾಲಿನ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಪಿ.ಯು.ಸಿ ವಿಭಾಗದ ಪ್ರಾಚಾರ್ಯರಾದ ನಾಗರಾಜೇಗೌಡರು ಓದಿ ಸಭೆಯು ಸರ್ವಾನುಮತ ದಿಂದ ಒಪ್ಪಿ ರೆಕಾರ್ಡ್ ಮಾಡಲಾಯಿತು. |
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು | ಹಿಂದಿನ ಮಹಾಸಭೆಯ ವರದಿಯನ್ನು ಡಿ.ಇಡಿ. ಪ್ರಾಚಾರ್ಯರಾದ ಕೆ.ಎನ್.ಚಂದ್ರಮೋಹನ್ ರವರು ಓದಿ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಿತು. |

| | | |
|---|---|---|
| 5. | ಸಂಘದ ವರದಿಯನ್ನು ಮಂಡಿಸುವುದು. | 2011–12ನೇ ಸಾಲಿನಲ್ಲಿ ಸಂಸ್ಥೆಯು ಕೈಗೊಂಡು ಪೂರೈಸಿರುವ ಕಾರ್ಯಕ್ರಮಗಳನ್ನು ಡಿ.ಇಡಿ. ಪ್ರಾಚಾರ್ಯರಾದ ಕೆ.ಎನ್.ಚಂದ್ರಮೋಹನ್ ರವರು ಓದಿದರು. ಜೊತೆ ಜೊತೆಗೆ ಸಾಧನೆಯ ಚಿತ್ರಗಳನ್ನ ತೆರೆಯ ಮೇಲೆ ಬಿತ್ತರಿಸಲಾಯಿತು. ಸಂಸ್ಥೆಯ ಈ ಸಾಧನ ವರದಿಯನ್ನು ಸಭೆಯು ಕೇಳಿ, ನೋಡಿ ಒಪ್ಪಿಗೆ ಸೂಚಿಸಿದ್ದರಿಂದ ರೆಕಾರ್ಡ್ ಮಾಡಲಾಯಿತು. |
| 6. | 2011– 12ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | 2011–12ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಮಂಡಿಸಿದರು. ಸಭೆಯು ಈ ವರದಿಗೆ ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದರಿಂದ ರೆಕಾರ್ಡ್ ಮಾಡಲಾಯಿತು. |
| 7. | 2012–13ನೇ ಸಾಲಿನ ಬಡ್ಜೆಟ್ ಮಂಜೂರು ಮಾಡುವುದು. | ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರು 2012–13ನೇ ಸಾಲಿನ ಬಡ್ಜೆಟ್ ಮಂಡನೆ ಮಾಡಿದರು. |

| ಕ್ರ.ಸಂ. | ವಿವರ | 2011–12ನೇ ಸಾಲಿಗೆ ಮಂಜೂರಾಗಿರುವುದು | 2011–12ನೇ ಸಾಲಿಗೆ ಖರ್ಚಾಗಿರುವುದು | 2012–13ನೇ ಸಾಲಿಗೆ ಮಂಜೂರಾತಿ ಕೋರಿರುವುದು. |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 25,00,000–00 | 17,60,179–00 | 22,00,000–00 |
| 2 | ವಿದ್ಯುಚ್ಛಕ್ತಿ ಶುಲ್ಕ | 50.000–00 | 28,539–00 | 50,000–00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000–00 | 31,950–00 | 50,000–00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 25,000–00 | ––––– | 25,000–00 |
| 5 | ಪ್ರಯಾಣ ಭತ್ಯೆ | 50,000–00 | ––––– | 25,000–00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 1,50,000–00 | 27,540–00 | 50,000–00 |
| 7 | ಅಂಚೆ ವೆಚ್ಚ | 5,000–00 | 2,000–00 | 5,000–00 |
| 8 | ಅನಿರೀಕ್ಷಿತ ವೆಚ್ಚ | 50,00–00 | ––––– | 50,000–00 |
| 9 | ಜಾಹಿರಾತು ವೆಚ್ಚ | 25,000–00 | 8,600–00 | 25,000–00 |
| 10 | ಫರ್ನಿಚರ್ ವೆಚ್ಚ | 1,00,000–00 | ––––– | 25,000–00 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 50,000–00 | 38,987–00 | 50,000–00 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 18,00,000–00 | 2,52,822–00 | 5,00,000–00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 12,50,000–00 | 5,72,382–00 | 9,00,000–00 |

| | | | | |
|---|---|---|---|---|
| 14 | ಸ್ಥಿರ ನಿಧಿಗಾಗಿ | 50,000–00 | ------ | 50,000–00 |
| 15. | ಬಿ.ಇಡಿ., ಪಿ.ಯು.ಸಿ. ನವೀಕರಣ ಶುಲ್ಕ ಪಾವತಿಸಲು | ---- | 99,000–00 | 1,00,000–00 |
| | **ಒಟ್ಟು** | **61,55,000–00** | **28,21,993–00** | **41,15,000–00** |

ಈ ಬಡ್ಜೆಟ್ ಗೆ ಸರ್ವ ಸದಸ್ಯರು ಒಪ್ಪಿಗೆ ನೀಡಿದ್ದರಿಂದ ರೆಕಾರ್ಡ್ ಮಾಡಲಾಯಿತು.

| | | |
|---|---|---|
| 8. | ಸಂಸ್ಥೆಯ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆಯ ಫಲಿತಾಂಶ ಪ್ರಕಟಣೆ. | ಸಂಸ್ಥೆಯ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆ ನಡೆಸಲು ವ್ಯವಸ್ಥೆ ಮಾಡಿದ್ದು 2012–13 ನೇ ಸಾಲಿಗೆ ನಡೆದ ಚುನಾವಣೆಗೆ ಈ ಕೆಳಕಂಡವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಗ್ರಾಮಭಾರತಿ ವಿದ್ಯಾಸಂಸ್ಥೆಯ ಚುನಾವಣಾಧಿಕಾರಿಗಳು ಘೋಷಣೆ ಮಾಡಿದ್ದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ಮಾಡಲಾಯಿತು. |

1. ಶ್ರೀ ಎಸ್. ಸಿ. ಕಿರಣ್ ಕುಮಾರ್ ಬಿನ್ ಎಸ್. ಸಿ. ಚಿಕ್ಕಣ್ಣಗೌಡ
   ಮನೆ ನಂ. 1166, ಹಳೆ ವಿಜಯ ಬ್ಯಾಂಕ್ ರಸ್ತೆ, ಕೆ.ಆರ್. ಪೇಟೆ.
2. ಶ್ರೀ ಕೆ. ಜಿ. ಹುಚ್ಚೇಗೌಡರು ಬಿನ್ ಗಿರೀಗೌಡ
   ಕರೋಟಿ, ಕಸಬಾ ಹೋ॥, ಕೆ.ಆರ್. ಪೇಟೆ. ತಾ॥
3. ಶ್ರೀ ಎ. ಎಂ. ನಂಜುಂಡೇಗೌಡರು ಬಿನ್ ಮರಿಗೌಡ
   ಐನೋರಹಳ್ಳಿ, ಕಿಕ್ಕೇರಿ ಹೋಬಳಿ,ಕೆ.ಆರ್. ಪೇಟೆ. ತಾ॥
4. ಶ್ರೀ ಎಸ್. ಸಿ. ರಾಮಲಿಂಗೇಗೌಡರು ಬಿನ್ ಎಸ್. ಕೆ. ಚಿಕ್ಕಣ್ಣಗೌಡ
   ಮನೆ ನಂ. 2915, 12ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ವಿ.ವಿ.ಮೊಹಲ್ಲ, ಮೈಸೂರು
5. ಶ್ರೀ ಎಸ್.ಎಸ್.ಶಾಂತಹೃದಯ ಬಿನ್ ಎಸ್.ಎಂ.ಸಿದ್ದೇಗೌಡ
   ಶೀಳನೆರೆ, ಶೀಳನೆರೆ ಹೋ॥, ಕೆ.ಆರ್.ಪೇಟೆ. ತಾ॥
6. ಶ್ರೀ ಎಲ್.ಜಿ.ನಾರಾಯಣಗೌಡ ಬಿನ್ ಗೋವಿಂದೇಗೌಡ
   ಲೋಕನಹಳ್ಳಿ, ಸಂತೆಬಾಚಹಳ್ಳಿ ಹೋ॥, ಕೆ ಆರ್.ಪೇಟೆ ಮಂಡ್ಯ–ಜಿಲ್ಲೆ.

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆ ನೀಡಲು ಅವಕಾಶ. | ಸಂಸ್ಥೆಯ ಸದಸ್ಯರಾದ ಕುಂದುರೇಗೌಡರು ಸಂಸ್ಥೆಗೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನ ಒದಗಿಸಿ ಕೊಟ್ಟು ಯಾವುದೇ ಲೋಪ ದೋಷವಿಲ್ಲದಂತೆ ಸಂಸ್ಥೆ ನಡೆಸುತ್ತಿದ್ದಾರೆ ಎಂದು ಅಧ್ಯಕ್ಷರನ್ನ ಅಭಿನಂದಿಸಿದರು. ಮತ್ತೊಬ್ಬ ಸದಸ್ಯರಾದ ಬಿ.ಶಿವಣ್ಣಗೌಡರು ಮಾತನಾಡಿ ಮಿನಿವಿಧಾನಸೌಧದಂತೆ ಕಾಣುತ್ತಿರುವ ಈ ಸಂಸ್ಥೆಯಲ್ಲಿ ಎಸ್.ಎಂ.ಲಿಂಗಪ್ಪನವರು ಹಾಗೂ ಎಸ್.ಸಿ.ಚಿಕ್ಕಣ್ಣಗೌಡರ ಪ್ರತಿಮೆ ಪ್ರತಿಷ್ಠಾಪಿಸುವುದು ಸೂಕ್ತ ಎಂದು ಹೇಳಿದರು. ಆದರೆ ಸಭೆ ಅವರ ಪ್ರತಿಮೆಗಳ ಸ್ಥಾಪನೆಗೆ ಸಂಸ್ಥೆಯಲ್ಲಿ ಹಣಕಾಸಿನ ತೊಂದರೆ ಇದೆ. ಇದಕ್ಕಿಂತ ಮುಖ್ಯವಾಗಿ ಸಂಸ್ಥೆ ಅವರ ಆದರ್ಶಗಳನ್ನ ಪಾಲಿಸಿಕೊಂಡು ಹೋಗುತ್ತಿದೆ ಅಷ್ಟು ಸಾಕು. ಪ್ರತಿಮೆಗಳ ಸ್ಥಾಪನೆ ಅಗತ್ಯವಿಲ್ಲ ಎಂಬ ನಿರ್ಧಾರ ತಳೆದಿದ್ದರಿಂದ ಆ ವಿಷಯ ಮುಕ್ತಾಯವಾಯಿತು. ಮತ್ತೊಬ್ಬ ಸದಸ್ಯರಾದ ರಾಮ್ ಪ್ರಸಾದ್ ರವರು ಮಾತನಾಡಿ ಸಂಸ್ಥೆ ಉತ್ತಮ ರೀತಿ ಆಡಳಿತ ನಿರ್ವಹಿಸಿಕೊಂಡು ಬರುತ್ತಿದೆ. ಇದೇ ರೀತಿ ಸಂಸ್ಥೆ ತಮ್ಮ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರುಗಳ ಹಿತವನ್ನು ಕಾಯ್ದುಕೊಂಡು ಮುಂದೆ ಸಾಗಲಿ. ಈ ದಿಸೆಯಲ್ಲಿ ಆಡಳಿತ ಮಂಡಳಿ ಸಂಸ್ಥೆಯ ಹಿತ ಕಾಪಾಡುತ್ತದೆ ಎಂಬ ನಂಬಿಕೆ ನಮಗಿದೆ ಎಂದು ಹೇಳಿದರು. |
| 10. | ಅಧ್ಯಕ್ಷರ ಭಾಷಣ | ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರಸಕ್ತ ಆಡಳಿತ ಮಂಡಳಿಗೆ ಚುನಾವಣೆ ನಡೆಯದಂತೆ ಅವಿರೋಧವಾಗಿ ನಿರ್ದೇಶಕರುಗಳನ್ನ ಆಯ್ಕೆ ಮಾಡಿ ಹಣದ ದುಂದು ವೆಚ್ಚ ಹಾಗೂ ಸದಸ್ಯರಲ್ಲಿ ಮಾನಸಿಕ ಭಿನ್ನತೆ |

| | | |
|---|---|---|
| | | ಉಂಟಾಗದಂತೆ ನಡೆದುಕೊಂಡಿದ್ದಕ್ಕೆ ಎಲ್ಲ ಸದಸ್ಯರಿಗೂ ಅಭಿನಂದನೆ ತಿಳಿಸಿದರು. ಹಾಗೆ ಅವಿರೋಧವಾಗಿ ಆಯ್ಕೆಗೊಂಡಿರುವ ನಿರ್ದೇಶಕರುಗಳಿಗೂ ಅಭಿನಂದನೆ ಸಲ್ಲಿಸಿದರು. ಸಂಸ್ಥೆಯ ಕಾರ್ಯಗಳಲ್ಲಿ ಆರ್ಥಿಕ ಸಮಸ್ಯೆ ಉಂಟಾದಾಗೆಲ್ಲ ಮುಂಗಡ ಹಣದ ನೆರವು ನೀಡುತ್ತಾ ಬರುತ್ತಿರುವ ಹಾಗೂ ಸ್ವಂತ ಹಣದಿಂದ ಸಂಸ್ಥೆಯ ವಾಯುವ್ಯ ಭಾಗದಲ್ಲಿರುವ ಅರಳಿ ಮರಕ್ಕೆ ಕಟ್ಟೆಯನ್ನು ನಿರ್ಮಿಸಿ ಕೊಟ್ಟಿರುವ ನಿರ್ದೇಶಕರಾದ ಕೆ.ಎಂ.ಪುಟ್ಟಲಕ್ಷ್ಮಮ್ಮನವರ ಸಹಕಾರಕ್ಕೆ ಅಭಿನಂದನೆ ಸಲ್ಲಿಸಿದರು. ಹಾಗೆ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ವತಿಯಿಂದ ಬಾಡಿಗೆ ಪಡೆದಿರುವ ಕಟ್ಟಡಕ್ಕೆ ಬಣ್ಣ ಬಳಿಸಿದ್ದಕ್ಕೆ ಹಾಗೂ ನೆಲಹಾಸಿಗೆ ಟೈಲ್ಸ್ ಗಳನ್ನು ಹಾಕಿಸಿ ಕಟ್ಟಡದ ಭದ್ರತೆ ಬಗ್ಗೆ ಕಾಳಜಿ ವಹಿಸಿರುವುದಕ್ಕೆ ಎಸ್.ಎಂ.ಲಿಂಗಪ್ಪ ಟ್ರಸ್ಟ್ ಗು ಅಭಿನಂದನೆ ಸಲ್ಲಿಸಿದರು. ಡಿ.ಇಡಿ. ಹಾಗೂ ಬಿ.ಇಡಿ. ಗಳಿಗೆ ದಾಖಲಾತಿ ಕುಂಠಿತವಾಗಿ ಅವುಗಳ ನಿರ್ವಹಣೆ ಕಷ್ಟವಾಗುತ್ತಿದೆ. ಆದ್ದರಿಂದ ನಾವೆಲ್ಲರೂ ಆ ವಿಷಯದಲ್ಲಿ ಆಸಕ್ತಿವಹಿಸಿ ದಾಖಲಾತಿ ಹೆಚ್ಚಳಕ್ಕೆ ಪ್ರಯತ್ನಿಸೋಣ ಎಂದರು. ಹೀಗೆ ಸಂಸ್ಥೆ ಉತ್ತಮ ಶೈಕ್ಷಣಿಕ ಮಟ್ಟವನ್ನು ಕಾಪಾಡಿಕೊಂಡು ಹೋಗಲು ಎಲ್ಲಾ ಸದಸ್ಯರ ಹಾಗೂ ಸಂಸ್ಥೆಯ ಬೋಧಕ–ಬೋಧಕೇತರ ವರ್ಗದವರ ಸಹಕಾರ ಬಯಸುತ್ತೇನೆ ಎಂದು ಹೇಳಿದರು. |
| 11. | ವಂದನಾರ್ಪಣೆ | ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಟಿ.ಸುರೇಶ್ ರವರು ಅಧ್ಯಕ್ಷರು, ನಿರ್ದೇಶಕರುಗಳು, ಸದಸ್ಯರುಗಳು ಹಾಗೂ ಬೋಧಕ–ಬೋಧಕೇತರ ವರ್ಗದವರಿಗೆಲ್ಲ ವಂದನೆ ಹೇಳಿದರು. |

| | | |
|---|---|---|
| 12. | ರಾಷ್ಟ್ರಗೀತೆ | ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡಿದ್ದ ಸರ್ವರೂ ರಾಷ್ಟ್ರಗೀತೆಯನ್ನ ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ತಾ॥ 29.07.2012

ಸ್ಥಳ ಗ್ರಾಮ ಭಾರತಿ ವಿದ್ಯಾಸಂಸ್ಥೆ

ಕೆ.ಆರ್.ಪೇಟೆ.

–ಸಹಿ–

(ಎಸ್.ಸಿ.ಕಿರಣ್ ಕುಮಾರ್)

# ಮಹಾಸಭೆ: 24 (ವಿಶೇಷ ಮಹಾಸಭೆ-3)

## ಸರ್ವ ಸದಸ್ಯರ ವಿಶೇಷ ಮಹಾಸಭೆ ತಾ॥13-01-2013

ಗ್ರಾಮ ಭಾರತಿ ವಿದ್ಯಾಸಂಸ್ಥೆ (ರಿ). ಕೆ.ಆರ್.ಪೇಟೆ ಈ ಸಂಸ್ಥೆಯ ಸರ್ವ ಸದಸ್ಯರ ವಿಶೇಷ ಮಹಾ ಸಭೆಯನ್ನು ದಿನಾಂಕ:13-01-2013 ನೇ ಭಾನುವಾರ ಬೆಳಿಗ್ಗೆ 10.30 ಕ್ಕೆ ಸರಿಯಾಗಿ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಿ, ಈ ವಿಶೇಷ ಮಹಾಸಬೆಯಲ್ಲಿನ ಮೀಟಿಂಗ್ ನಡಾವಳಿಗಳು.

ಹಾಜರಿ:- ಹಾಜರಿಯಾಗಿದ್ದ ಸದಸ್ಯರುಗಳ ಸಹಿಯನ್ನು ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಸಂಸ್ಥೆಯ ಶಿಕ್ಷಕೀಯರಾದ ಲೀಲಾವತಿ, ಮಂಜುಳಾ ಹಾಗೂ ಹಿತೈಷಿಣಿ ಮೇಡಂ ರವರು ದೇವತಾ ಪ್ರಾರ್ಥನೆ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ಸಂಸ್ಥೆಯ ಬಿ.ಇಡಿ ವಿಭಾಗದ ಪ್ರಾಚಾರ್ಯರಾದ ಪಿ. ಸುರೇಶ್ ರವರು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಯವರು, ನಿರ್ದೇಶಕರುಗಳು, ಸರ್ವಸದಸ್ಯರು ಹಾಗೂ ಸಂಸ್ಥೆಯ ಬೋಧಕ, ಬೋಧಕೇತರ ವೃಂದದವರಿಗೆಲ್ಲ ಸ್ವಾಗತ ಕೋರಿದರು. |
| 3. | ಸಂಸ್ಥೆಯ ಮಾಜಿ ಕಾರ್ಯದರ್ಶಿಯವರಾದ ಪೂಜ್ಯಶ್ರೀ ಗಿರಿಗೌಡರವರಿಗೆ ಹಾಗೂ ಸದಸ್ಯರಾಗಿದ್ದ ಶಿವಣ್ಣಗೌಡರು ದೈವಾಧೀನರಾಗಿದ್ದು ಇವರ ಆತ್ಮಕ್ಕೆ ಶಾಂತಿ ಕೋರಿ ಮೌನ ಆಚರಿಸುವುದು. | ಸಂಸ್ಥೆಯ ಮಾಜಿ ಕಾರ್ಯದರ್ಶಿಯವರಾದ ಪೂಜ್ಯಶ್ರೀ ಗಿರಿಗೌಡರವರಿಗೆ ಹಾಗೂ ಸದಸ್ಯರಾಗಿದ್ದ ಶಿವಣ್ಣಗೌಡರು ದೈವಾಧೀನರಾಗಿದ್ದು ಇವರ ಆತ್ಮಕ್ಕೆ ಶಾಂತಿಯನ್ನು ಸಭೆಯು ಎದ್ದು ನಿಂತು ಮೌನ ಆಚರಿಸುವುದರ ಮೂಲಕ ಅವರುಗಳ ಆತ್ಮಕ್ಕೆ ಶಾಂತಿ ಕೋರಿತು. |
| 4. | ಸರ್ವ ಸದಸ್ಯರ ವಿಶೇಷ ಮಹಾ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು. | ಸಂಸ್ಥೆಯ ಪಿ.ಯು.ಸಿ. ಪ್ರಾಚಾರ್ಯರಾದ ನಾಗರಾಜೇಗೌಡರು ಸರ್ವ ಸದಸ್ಯರ ವಿಶೇಷ ಮಹಾ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿದರು. ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಿತು. |

| | | |
|---|---|---|
| 5. | ಹಿಂದಿನ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನ ಓದಿ ವರದಿ ಮಾಡುವ ವಿಚಾರ. | ಸಂಸ್ಥೆಯ ಡಿ.ಇಡಿ. ಪ್ರಾಚಾರ್ಯರಾದ ಕೆ.ಎನ್.ಚಂದ್ರ ಮೋಹನ್ ರವರು ಹಿಂದಿನ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಓದಿ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಿತು. |
| 6. | ಸಂವಿಧಾನ ತಿದ್ದುಪಡಿಯನ್ನು ಮಂಡಿಸಿ, ಚರ್ಚಿಸಿ ಅಂಗೀಕರಿಸುವುದು. | ಸಂವಿಧಾನ ತಿದ್ದುಪಡಿಯನ್ನ ಈ ಕೆಳಕಂಡಂತೆ ಮಂಡಿಸಲಾಯಿತು. |

V.GOVERNING COUNCIL

In view of the demise of the Founder member Shri S.M.Lingappa of the society. S.C.Kiran Kumar son of Late S.C.Chikkanna Gowda Is the permanent member of the Governing Council.

XIII FUNDS AND OTHER PROPERTIES:

**Delete: - 2.** Any person or persons that may be authorised of appointed by the General Body at the annual Meeting shall audit the accounts of the institutions.

INSERT CLAUSE IN LIEU OF THE ABOVE CLAUSE.

2. The funds of the society shall be maintained regularly and the accounts shall be duly audited every year by the chartered accountant appointed by the governing Council. The account shall be closed every year by 31st March.

ADD ADDITIONAL SUB CLAUSE TO CLAUSE XIII

5. The funds of the society shall be invested in the mode specified under the provisions of the section 10(1) (d) read with other provisions of Income Tax Act from time to time.

6. The funds and income of the society shall be solly utilised for the fullfilment of the objectives of the society and no members shall be entitled to any profits, interest, Returns, dividends etc.

ADD FOLLOWING NEW CLAUSE

XV. AMENDMENT

No amendment to the society rules or bylaws shall be made which may prove to the Republican to the provisions of section 1 (15), 11 to 13 And 80 of the Income Tax Act. FURTHER NO AMENDMENT SHALL BE CARRIED OUT WITHOUT PRIOR APPROVAL OF THE COMMISSIONER OF INCOME TAX.

XVI. DISSOLUTION:-
In the event of dissolution or winding up of the society, the Assets of the society as on the date of dissolution SHALL UNDER NO CIRCUMSTANCES BE DISTRIBUTED AMONG THE PERMANENT MEMBER OR GOVERNING COUNCIL MEMBERS and the same shall be transferred to the other educational or charitable society or trust whose aims and objectives are similar to the above society and which also enjoys recognition on the section 80g of the Income Tax Act 1961.

XVII. The facilities and services provided by the society shall be opened to all irrespective of caste, creed or religion.

ಈ ಮೇಲ್ಕಂಡ ಎಲ್ಲಾ ತಿದ್ದುಪಡಿಗಳನ್ನ ಸಭೆಯು ಒಪ್ಪಿ ಸರ್ವಾನುಮತದಿಂದ ಅಂಗೀಕಾರವನ್ನು ನೀಡಲಾಯಿತು.

| | | |
|---|---|---|
| 7. | ಅಧ್ಯಕ್ಷರ ಭಾಷಣ | ಸನ್ಮಾನ್ಯ ಅಧ್ಯಕ್ಷರು ತಮ್ಮ ಭಾಷಣದ ಪ್ರಾರಂಭದಲ್ಲಿ ಸಂಸ್ಥೆಯ ಹಿಂದಿನ ಕಾರ್ಯದರ್ಶಿಗಳಾಗಿದ್ದ ಎಂ.ಜಿ.ಗಿರಿಗೌಡರಿಗೆ ಹಾಗೂ ಸದಸ್ಯರಾಗಿದ್ದ ಶಿವಣ್ಣಗೌಡ.ಬಿ. ರವರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರು ಸಂಸ್ಥೆಗೆ ನೀಡಿದ್ದ ಸೇವೆಯನ್ನು ಶ್ಲಾಘಿಸಿದರು. ಈ ವಿಶೇಷ ವಾರ್ಷಿಕ ಮಹಾಸಭೆಯ ಪ್ರಮುಖ ಉದ್ದೇಶ ಸಂವಿಧಾನ ತಿದ್ದುಪಡಿ ಮಾಡುವುದು. ಕಾರಣ ಆದಾಯ ತೆರಿಗೆಯಿಂದ ಸಂಸ್ಥೆಗೆ ವಿನಾಯಿತಿ ಕೋರಿ ಅರ್ಜಿಯನ್ನು ಸಲ್ಲಿಸಲಾಗಿತ್ತು. ಆದರೆ ಸದರಿ ಇಲಾಖೆಯವರು ಸಂವಿಧಾನದಲ್ಲಿ ಕೆಲವು ಮಾರ್ಪಾಡುಗಳನ್ನ ಮಾಡಲು |

| | | |
|---|---|---|
| | | ಸೂಚಿಸಿದ್ದರು. ಅದರಂತೆ ಮಾಡಬೇಕಾದ ತಿದ್ದುಪಡಿಗಳನ್ನ ಸಭೆಯಲ್ಲಿ ಮಂಡಿಸಲಾಯಿತು. ಈ ತಿದ್ದುಪಡಿಗಳಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದಕ್ಕೆ ಅಭಿನಂದನೆ ಸಲ್ಲಿಸಿದರು. ಹಾಗೆ ಸಂಸ್ಥೆ ಪ್ರಗತಿ ಹಾದಿಯಲ್ಲಿ ಮುನ್ನಡೆಯಲು ಸರ್ವರೆಲ್ಲರ ಸಹಕಾರ ಬಯಸುತ್ತೇನೆ ಎಂದು ಹೇಳಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. |
| 8. | ವಂದನಾರ್ಪಣೆ | ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕರಾದ ಬಸವರಾಜಯ್ಯನವರು ಅಧ್ಯಕ್ಷರು, ನಿರ್ದೇಶಕರುಗಳು, ಸರ್ವ ಸದಸ್ಯರಿಗೆ ಹಾಗೂ ಸಂಸ್ಥೆಯ ಬೋಧಕ, ಬೋಧಕೇತರ ವೃಂದಕೆಲ್ಲ ವಂದನೆ ಹೇಳಿದರು. |
| 9. | ರಾಷ್ಟ್ರಗೀತೆ | ವಿಶೇಷ ಮಹಾ ಸಭೆಯಲ್ಲಿ ಪಾಲ್ಗೊಂಡಿದ್ದ ಸರ್ವರೂ ಎದ್ದುನಿಂತು ರಾಷ್ಟ್ರಗೀತೆ ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ತಾ॥ 13.01.2013 –ಸಹಿ–

ಸ್ಥಳ ಗ್ರಾಮ ಭಾರತಿ ವಿದ್ಯಾಸಂಸ್ಥೆ (ಎಸ್.ಸಿ.ಕಿರಣ್ ಕುಮಾರ್)

ಕೆ.ಆರ್.ಪೇಟೆ.

## ಮಹಾಸಭೆ: 25

## 2012–13 ನೇ ಸಾಲಿನ ವಾರ್ಷಿಕ ಮಹಾಸಭೆ ತಾ॥ 28.07.13

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೆ.ಆರ್.ಪೇಟೆ ಈ ಸಂಸ್ಥೆಯ 2012–13 ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ॥ 28.07.13 ಭಾನುವಾರ ಬೆಳಿಗ್ಗೆ 10:30 ಘಂಟೆಗೆ ಸರಿಯಾಗಿ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿನ ಮೀಟಿಂಗ್ ನಡವಳಿಕೆಗಳು.

ಹಾಜರಿ :– ಹಾಜರಿಯಾಗಿದ್ದ ಸದಸ್ಯರ ಸಹಿಯನ್ನು ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಸಂಸ್ಥೆಯ ಹಿರಿಯ ಪ್ರಾಥಮಿಕ ಶಿಕ್ಷಕಿಯರಾದ ಶ್ರೀಮತಿ ಲೀಲಾವತಿ ಮತ್ತು ಶ್ರೀಮತಿ ಹಿತೈಷಿಣಿಯವರು ದೇವತಾ ಪ್ರಾರ್ಥನೆ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ಸಂಸ್ಥೆಯ ಬಿ.ಇಡಿ. ವಿಭಾಗದ ಪ್ರಾಚಾರ್ಯರಾದ ಪಿ.ಸುರೇಶ್ ರವರು ಸರ್ವಸದಸ್ಯರ ಸಭೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕರುಗಳು ಸರ್ವ ಸದಸ್ಯರು ಹಾಗೂ ಸಂಸ್ಥೆಯ ಬೋಧಕ ಬೋಧಕೇತರ ವರ್ಗ ದವರೆಲ್ಲರಿಗೂ ಸ್ವಾಗತವನ್ನು ಕೋರಿದರು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವುದು. | 2012–13ನೇ ಸಾಲಿನ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಪಿ.ಯು.ಸಿ ವಿಭಾಗದ ಪ್ರಾಚಾರ್ಯರಾದ ನಾಗರಾಜೇಗೌಡರು ಓದಿ ಸಭೆಯು ಸರ್ವಾನುಮತ ದಿಂದ ಒಪ್ಪಿ ರೆಕಾರ್ಡ್ ಮಾಡಲಾಯಿತು. |
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು | ಹಿಂದಿನ ಮಹಾಸಭೆಯ ವರದಿಯನ್ನು ಡಿ.ಇಡಿ. ಪ್ರಾಚಾರ್ಯರಾದ ಕೆ.ಎನ್.ಚಂದ್ರಮೋಹನ್ ರವರು ಓದಿ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಲಾಯಿತು. |

| | | |
|---|---|---|
| 5. | ಸಂಘದ ವರದಿಯನ್ನು ಮಂಡಿಸುವುದು. | 2012–13ನೇ ಸಾಲಿನಲ್ಲಿ ಸಂಸ್ಥೆಯು ಕೈಗೊಂಡು ಪೂರೈಸಿರುವ ಕಾರ್ಯಕ್ರಮಗಳನ್ನು ಡಿ.ಇಡಿ. ಪ್ರಾಚಾರ್ಯರಾದ ಕೆ.ಎನ್.ಚಂದ್ರಮೋಹನ್ ರವರು ಓದಿದರು. ಸಂಸ್ಥೆಯ ಈ ಸಾಧನ ವರದಿಯನ್ನು ಸಭೆಯು ಕೇಳಿ ಒಪ್ಪಿಗೆ ಸೂಚಿಸಿದ್ದರಿಂದ ರೆಕಾರ್ಡ್ ಮಾಡಲಾಯಿತು. |
| 6. | 2012–13ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | 2012–13ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಹೆಚ್.ಎಸ್.ಕೃಷ್ಣ ರವರು ಮಂಡಿಸಿದರು. ಈ ವರದಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದರಿಂದ ರೆಕಾರ್ಡ್ ಮಾಡಲಾಯಿತು. |
| 7. | 2013–14ನೇ ಸಾಲಿನ ಬಡ್ಜೆಟ್ ಮಂಜೂರು ಮಾಡುವುದು. | ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ. ಹುಚ್ಚೇಗೌಡರು 2013–14ನೇ ಸಾಲಿನ ಬಡ್ಜೆಟ್ ಮಂಡನೆ ಮಾಡಿದರು. |

**2013–14ನೇ ಸಾಲಿನ ಮಂಜುರಾತಿಗಾಗಿ ಬಡ್ಜೆಟ್ ವಿವರ.**

| ಕ್ರ.ಸಂ. | ವಿವರ | 2012–13ನೇ ಸಾಲಿಗೆ ಮಂಜೂರಾಗಿರುವುದು | 2012–13ನೇ ಸಾಲಿಗೆ ಖರ್ಚಾಗಿರುವುದು | 2013–14ನೇ ಸಾಲಿಗೆ ಮಂಜೂರಾತಿ ಕೋರಿರುವುದು. |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 22,00,000 | 16,95,863 | 22,00,000 |
| 2 | ವಿದ್ಯುಚ್ಛಕ್ತಿ ಶುಲ್ಕ | 50,000 | 26,374 | 50,000 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000 | 7,575 | 50,000 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 25,000 | ---- | 25,000 |
| 5 | ಪ್ರಯಾಣ ಭತ್ಯೆ | 25,000 | 400 | 25,000 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 50,000 | 89,575 | 1,00,000 |
| 7 | ಅಂಚೆ ವೆಚ್ಚ | 5,000 | 1,390 | 5,000 |
| 8 | ಅನಿರೀಕ್ಷಿತ ವೆಚ್ಚ | 50,000 | 86,760 | 50,000 |
| 9 | ಜಾಹಿರಾತು ವೆಚ್ಚ | 25,000 | 1,900 | 25,000 |
| 10 | ಫರ್ನೀಚರ್ ವೆಚ್ಚ | 25,000 | ---- | 1,25,000 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 50,000 | 23,785 | 50,000 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 5,00,000 | 24,125 | 3,00,000 |

| | | | | |
|---|---|---|---|---|
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 9,00,000 | 1,24,390 | 9,00,000 |
| 14 | ಸ್ಥಿರ ನಿಧಿಗಾಗಿ | 50,000 | ---- | 1,00,000 |
| 15 | ಬಿ.ಇಡಿ., ಪಿ.ಯು.ಸಿ. ನವೀಕರಣ ಶುಲ್ಕ | 1,00,000 | 99,485 | 1,00,000 |
| | **ಒಟ್ಟು** | **41,15,000-00** | **21,41,622** | **41,05,000** |

ಈ ಬಡ್ಜೆಟ್ ಗೆ ಸರ್ವ ಸದಸ್ಯರು ಒಪ್ಪಿಗೆ ನೀಡಿದ್ದರಿಂದ ರೆಕಾರ್ಡ್ ಮಾಡಲಾಯಿತು.

| | | |
|---|---|---|
| 8. | 2013-14ನೇ ಸಾಲಿಗೆ ಆಡಳಿತ ಮಂಡಳಿ ರಚನೆ. | 2013-14ನೇ ಸಾಲಿಗೆ ಆಡಳಿತ ಮಂಡಳಿ ಸದಸ್ಯರ ಹೆಸರು ಹಾಗೂ ಪದನಾಮಗಳನ್ನ ಕಾರ್ಯದರ್ಶಿ ಕೆ.ಜಿ.ಹುಚ್ಚೇಗೌಡರು ಮಂಡಿಸಿದರು. |

| ಹೆಸರು | ಪಧನಾಮ |
|---|---|
| 1. ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು | ಅಧ್ಯಕ್ಷರು |
| 2. ಶ್ರೀ ಕೆ.ಜಿ.ಹುಚ್ಚೇಗೌಡರು | ಕಾರ್ಯದರ್ಶಿಗಳು |
| 3. ಶ್ರೀ ಎ.ಎಂ.ನಂಜುಂಡೇಗೌಡರು | ನಿರ್ದೇಶಕರು |
| 4. ಶ್ರೀ ಬಿ.ಎಸ್.ಲಕ್ಷ್ಮೀಪತಿ ಜೋಯಿಸರು | ನಿರ್ದೇಶಕರು |
| 5. ಶ್ರೀ ಎಲ್.ಜಿ.ನಾರಾಯಣಗೌಡರು | ನಿರ್ದೇಶಕರು |
| 6. ಶ್ರೀ ಎಸ್.ಎಸ್.ಶಾಂತಹೃದಯರವರು | ನಿರ್ದೇಶಕರು |
| 7. ಶ್ರೀ ಎಸ್.ಸಿ.ರಾಮಲಿಂಗೇಗೌಡರು | ನಿರ್ದೇಶಕರು |
| 8. ಶ್ರೀ ಎಸ್.ಕೆ.ರಂಗಸ್ವಾಮಿಯವರು | ನಿರ್ದೇಶಕರು |
| 9. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು | ನಿರ್ದೇಶಕರು |

ಈ ಮಂಡಳಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದ್ದರಿಂದ ರೆಕಾರ್ಡ್ ಮಾಡಲಾಯಿತು.

| | | |
|---|---|---|
| 9. | ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ಗೆ ಬಾಡಿಗೆ ನೀಡಿರುವ ಕಟ್ಟಡವನ್ನು ಬೋಗ್ಯಕ್ಕೆ ನೀಡುವ ವಿಚಾರ. | ಗ್ರಾಮಭಾರತಿ ವಿದ್ಯಾಸಂಸ್ಥೆಗೆ ಹಣಕಾಸಿನ ಸಹಾಯವನ್ನು ನೀಡುತ್ತಾ ಬರುತ್ತಿರುವ ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ಗೆ ಸಂಸ್ಥೆ ಬಾಡಿಗೆಗೆ ನೀಡಿದ್ದ ಕಟ್ಟಡವನ್ನು ಬೋಗ್ಯಕ್ಕೆ |

| | | |
|---|---|---|
| | | ನೀಡಲು ಸಭೆಯು ಸರ್ವಾನುಮತದಿಂದ ಒಪ್ಪಿದ್ದರಿಂದ ಅಂಗೀಕಾರ ಮಾಡಲಾಯಿತು. |
| 10. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆ ನೀಡಲು ಅವಕಾಶ. | ಸಂಸ್ಥೆಯ ಸದಸ್ಯರಾದ ರಾಂಪ್ರಸಾದ್ ರವರು ಮಾತನಾಡಿ ಸ್ವಾಮಿ ವಿವೇಕಾನಂದರ 150ನೇ ವರ್ಷದ ಅಂಗವಾಗಿ ಸರ್ಕಾರ ನೀಡಿರುವ ನೂರು ಕೋಟಿ ಹಣದಲ್ಲಿ ವಿವೇಕಾನಂದರ ಆಲೋಚನೆ, ಚಿಂತನೆಗಳಂತೆ ಹಲವು ಕಾರ್ಯಕ್ರಮ ಹಮ್ಮಿಕೊಂಡಿದೆ. ನಿಮ್ಮ ಸಂಸ್ಥೆಯ ಹಿಂದುಳಿದ (ಶಿಕ್ಷಣದಲ್ಲಿ) ಮಕ್ಕಳಿಗೆ ನೀವು ಒಪ್ಪಿದರೆ ವಿವೇಕಾನಂದ ಟ್ರಸ್ಟ್ ವತಿಯಿಂದ ಶಿಕ್ಷಣದ ನೆರವು ನೀಡಲು ಮುಂದಾಗುತ್ತೇವೆ ಎಂದರು. ಜೊತೆಗೆ ಶಿಕ್ಷಣ ಸಂಸ್ಥೆಗಳ ಪ್ರಗತಿಗೆ ಬೋಧಕ ವರ್ಗ ಬಹಳ ಮುಖ್ಯ ಹಾಗಾಗಿ ಸಂಸ್ಥೆಯಲ್ಲಿ ಒಂದು ಶಿಕ್ಷಕರ ಕಲ್ಯಾಣ ನಿಧಿ ತೆರೆಯುವಂತೆ ಸಲಹೆ ನೀಡಿದರು. ಪ್ರಾಥಮಿಕ ಶಾಲೆ ವಿಭಾಗದ ಮುಖ್ಯ ಶಿಕ್ಷಕಿಯವರಾದ ಲೀಲಾವತಿಯವರು ಮಾತನಾಡಿ ಸಂಸ್ಥೆ, ಶಿಕ್ಷಕರು ಹಾಗೂ ಮಕ್ಕಳ ಅಭಿವೃದ್ಧಿಯಲ್ಲಿ ಹಿಂದಿನ ಹಾಗೂ ಪ್ರಸ್ತುತ ಅಧ್ಯಕ್ಷರ ಶ್ರಮವನ್ನು ಶ್ಲಾಘಿಸಿದರು. |
| 11. | ಅಧ್ಯಕ್ಷರ ಭಾಷಣ | ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರಸ್ತುತ ಸಾಲಿನಲ್ಲಿ ಡಿ.ಇಡಿ. ವಿಭಾಗಕ್ಕೆ ದಾಖಲಾತಿ ಇಲ್ಲದ್ದರಿಂದ ಮುಂದಿನ ವರ್ಷದಿಂದ ಡಿ.ಇಡಿ. ವಿಭಾಗವನ್ನು ಮುಚ್ಚಬೇಕಾಗಿರು ವುದೇ ಬೇಸರ ತಂದಿದೆ. ಹಾಗೆ ಸಂಸ್ಥೆಯಲ್ಲಿ ಆರನೇ ತರಗತಿಯ ಆಂಗ್ಲ ಮಾಧ್ಯಮ ತೆರೆದಿದ್ದು ಆ ವಿಭಾಗಕ್ಕೆ ಉತ್ತಮ ದಾಖಲಾತಿ ಆಗುತ್ತಿರುವುದು, ಸಂಸ್ಥೆಯಲ್ಲಿ ಒಂದು ವಿಭಾಗ ನಶಿಸಿದರು ಮತ್ತೊಂದು ವಿಭಾಗ ಚಿಗುರುತ್ತಿರುವುದು ಸಂತಸ ತಂದಿದೆ ಎಂದು ಹೇಳಿದರು. ದೈವಾಧೀನರಾಗಿರುವ ಸದಸ್ಯರಾದ ಶಿವಣ್ಣರವರನ್ನು |

| | | |
|---|---|---|
| | | ಸ್ಮರಿಸಿದರು. ಹಾಗೆ 2015ಕ್ಕೆ ಎಸ್.ಎಂ.ಲಿಂಗಪ್ಪನವರು ದೈವಾಧೀನರಾಗಿ 25 ವರ್ಷವಾಗುತ್ತಿರುವ ಸಂದರ್ಭದಲ್ಲಿ ಅವರ ಜೀವನ ಚಿತ್ರಣದ ಪುಸ್ತಕವನ್ನು ಹೊರತರಲು ನಿರ್ಧರಿಸಿದ್ದು ಎಸ್.ಎಂ.ಲಿಂಗಪ್ಪನವರಿಗೆ ಸಂಬಂಧಪಟ್ಟ ಯಾವುದೇ ವಿಷಯ ಹಾಗೂ ಫೋಟೋಗಳಿದ್ದರೆ ಸಂಸ್ಥೆಗೆ ನೀಡಿ ಸಹಕರಿಸಿ ಎಂದು ಕೇಳಿಕೊಂಡರು. ಹಾಗೆ ಶ್ಯಾಮ್ ಪ್ರಸಾದ್ ರವರು ಶಿಕ್ಷಣ ಕಲ್ಯಾಣ ನಿಧಿಗೆ ಚಾಲನೆ ನೀಡಬೇಕೆಂಬ ವಿಷಯಕ್ಕೆ ನಮ್ಮ ಸಂಸ್ಥೆಯಲ್ಲಿ ಈಗಾಗಲೇ ಈ ನಿಧಿಯ ವ್ಯವಸ್ಥೆ ಇದೆ. ಯಾರ್ ಆಗಲಿ ತಮ್ಮ ಕೈಲಾದ ಹಣ ನೀಡಿದರೆ ಆಧರದಿಂದ ಸ್ವೀಕರಿಸಿ ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುತ್ತೇವೆ ಎಂದು ಹೇಳಿದರು. ಸಂಸ್ಥೆಯ ಅಭಿವೃದ್ಧಿಗೆ ಇನ್ನು ಮುಂದೆಯೂ ತಮ್ಮಗಳ ಸಹಕಾರ ಬಯಸುತ್ತೇವೆ ಎಂದು ಹೇಳಿದರು. |
| 12. | ವಂದನಾರ್ಪಣೆ | ಪ್ರೌಢಶಾಲಾ ವಿಭಾಗದ ಎಸ್.ಬಸವರಾಜಯ್ಯರವರು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಯವರು, ನಿರ್ದೇಶಕರುಗಳು, ಸರ್ವಸದಸ್ಯರು ಹಾಗೂ ಸಂಸ್ಥೆಯ ಬೋಧಕ ಬೋಧಕೇತರ ವೃಂದದವರಿಗೆಲ್ಲ ವಂದನೆಗಳನ್ನು ಸಲ್ಲಿಸಿದರು. |
| 13. | ರಾಷ್ಟ್ರಗೀತೆ | ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡಿದ್ದ ಸರ್ವರು ಎದ್ದು ನಿಂತು ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ತಾ॥ 28.07.2013

ಸ್ಥಳ ಗ್ರಾಮ ಭಾರತಿ ವಿದ್ಯಾಸಂಸ್ಥೆ

ಕೆ.ಆರ್.ಪೇಟೆ.

–ಸಹಿ–

(ಎಸ್.ಸಿ.ಕಿರಣ್ ಕುಮಾರ್)

## ಮಹಾಸಭೆ: 26

## 2013–14 ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ತಾ॥ 27.07.14

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೆ.ಆರ್.ಪೇಟೆ ಈ ಸಂಸ್ಥೆಯ 2013–14 ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ॥ 27.7.14ನೇ ಭಾನುವಾರ ಬೆಳಿಗ್ಗೆ 10:30 ಘಂಟೆಗೆ ಸರಿಯಾಗಿ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿನ ಮೀಟಿಂಗ್ ನಡವಳಿಕೆಗಳು.

ಹಾಜರಿ :– ಹಾಜರಿಯಾಗಿದ್ದ ಸದಸ್ಯರ ಸಹಿಯನ್ನು ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಸಂಸ್ಥೆಯ ಹಿರಿಯ ಪ್ರಾಥಮಿಕ ಶಿಕ್ಷಕಿಯರಾದ ಶ್ರೀಮತಿ ಲೀಲಾವತಿ ಮತ್ತು ಹಿತೈಷಿಣಿಯವರು ದೇವತಾ ಪ್ರಾರ್ಥನೆ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ಸಂಸ್ಥೆಯ ಎಸ್.ಎಂ.ಲಿಂಗಪ್ಪ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಹೆಚ್.ಟಿ.ನಾಗರಾಜೇ ಗೌಡರವರು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕರುಗಳು ಸರ್ವ ಸದಸ್ಯರು ಹಾಗೂ ಸಂಸ್ಥೆಯ ಬೋಧಕ–ಬೋಧಕೇತರ ವರ್ಗ ದವರಿಗೆ ಸ್ವಾಗತವನ್ನು ಕೋರಿದರು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವುದು. | 2013–14ನೇ ಸಾಲಿನ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾದ್ಯಾಯರಾದ ಶ್ರೀ ಪ್ರದೀಪ್ ರವರು ಓದಿ ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡಲಾಯಿತು. |

| | | |
|---|---|---|
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು | ಹಿಂದಿನ ಮಹಾಸಭೆಯ ವರದಿಯನ್ನು ಬಿ.ಇಡಿ. ಪ್ರಾಂಶುಪಾಲರಾದ ಪಿ.ಸುರೇಶರವರು ಓದಿ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಲಾಯಿತು. |
| 5. | ಸಂಘದ ವರದಿಯನ್ನು ಮಂಡಿಸುವುದು. | ಸಂಸ್ಥೆಯ ಬಿ.ಇಡಿ. ಪ್ರಾಚಾರ್ಯರಾದ ಪಿ.ಸುರೇಶರವರು 2013–14ನೇ ಸಾಲಿನಲ್ಲಿ ಸಂಸ್ಥೆಯು ಕೈಗೊಂಡು ಪೂರೈಸಿರುವ ಕಾರ್ಯಕ್ರಮಗಳನ್ನು ಓದಿದರು. ಸಭೆಯು ಈ ಸಾಧನ ವರದಿಯನ್ನು ಕೇಳಿ ಒಪ್ಪಿಗೆ ನೀಡಿದ್ದರಿಂದ ರೆಕಾರ್ಡ್ ಮಾಡಲಾಯಿತು. |
| 6. | 2013–14ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | 2013–14ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಹೆಚ್.ಎಸ್.ಕೃಷ್ಣ ರವರು ಮಂಡಿಸಿದರು. ಈ ವರದಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದರಿಂದ ರೆಕಾರ್ಡ್ ಮಾಡಲಾಯಿತು. |
| 7. | 2014–15ನೇ ಸಾಲಿನ ಬಡ್ಜೆಟ್ ಮಂಜೂರು ಮಾಡುವುದು. | ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ. ಹುಚ್ಚೇಗೌಡರು 2014–15ನೇ ಸಾಲಿನ ಬಡ್ಜೆಟ್ ಮಂಡನೆ ಮಾಡಿದರು. |

**2014–15ನೇ ಸಾಲಿನ ಮಂಜುರಾತಿಗಾಗಿ ಬಡ್ಜೆಟ್ ವಿವರ.**

| ಕ್ರ.ಸಂ. | ವಿವರ | 2013–14ನೇ ಸಾಲಿಗೆ ಮಂಜೂರಾಗಿರುವುದು | 2013–14ನೇ ಸಾಲಿಗೆ ಖರ್ಚಾಗಿರುವುದು | 2014–15ನೇ ಸಾಲಿಗೆ ಮಂಜೂರಾತಿ ಕೋರಿರುವುದು. |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 22,00,000 | 18,32,324–00 | 30,00,000–00 |
| 2 | ವಿದ್ಯುಚ್ಛಕ್ತಿ ಶುಲ್ಕ | 50,000 | 22,077–00 | 50,000–00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000 | 14,200–00 | 50,000–00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 25,000 | ---- | 25,000–00 |
| 5 | ಪ್ರಯಾಣ ಭತ್ಯೆ | 25,000 | 7,400–00 | 25,000–00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 1,00,000 | 942–00 | 1,00,000–00 |
| 7 | ಅಂಚೆ ವೆಚ್ಚ | 5,000 | 1,400–00 | 5,000–00 |
| 8 | ಅನಿರೀಕ್ಷಿತ ವೆಚ್ಚ | 50,000 | ---- | 50,000–00 |
| 9 | ಜಾಹಿರಾತು ವೆಚ್ಚ | 25,000 | 1,200–00 | 25,000–00 |
| 10 | ಫರ್ನಿಚರ್ ವೆಚ್ಚ | 1,25,000 | 1,32,000–00 | 2,00,000–00 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 50,000 | 38,058–00 | 75,000–00 |

| | | | | |
|---|---|---|---|---|
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 3,00,000 | 1,44,309–00 | 10,00,000–00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 9,00,000 | ---- | 1,20,000–00 |
| 14 | ಸ್ಥಿರ ನಿಧಿಗಾಗಿ | 1,00,000 | 16,00,000–00 | 5,00,000–00 |
| 15 | ಬಿ.ಇಡಿ., ಪಿ.ಯು.ಸಿ. ನವೀಕರಣ ಶುಲ್ಕ | 1,00,000 | 73,500–00 | 1,50,000–00 |
| | **ಒಟ್ಟು** | **41,05,000** | **38,67,410–00** | **53,75,000–00** |

ಈ ಬಡ್ಜೆಟ್ ಗೆ ಸರ್ವ ಸದಸ್ಯರು ಒಪ್ಪಿಗೆ ನೀಡಿದ್ದರಿಂದ ರೆಕಾರ್ಡ್ ಮಾಡಲಾಯಿತು.

| | | |
|---|---|---|
| 8. | 2014–15ನೇ ಸಾಲಿಗೆ ಆಡಳಿತ ಮಂಡಳಿ ರಚನೆ. | 2014–15ನೇ ಸಾಲಿಗೆ ಆಡಳಿತ ಮಂಡಳಿ ಸದಸ್ಯರ ಹೆಸರು ಹಾಗೂ ಪದನಾಮಗಳನ್ನ ಕಾರ್ಯದರ್ಶಿ ಕೆ.ಜಿ.ಹುಚ್ಚೇಗೌಡರು ಮಂಡಿಸಿದರು. |

| ಹೆಸರು | ಪಧನಾಮ |
|---|---|
| 1. ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು | ಅಧ್ಯಕ್ಷರು |
| 2. ಶ್ರೀ ಕೆ.ಜಿ.ಹುಚ್ಚೇಗೌಡರು | ಕಾರ್ಯದರ್ಶಿಗಳು |
| 3. ಶ್ರೀ ಎ.ಎಂ.ನಂಜುಂಡೇಗೌಡರು | ನಿರ್ದೇಶಕರು |
| 4. ಶ್ರೀ ಬಿ.ಎಸ್.ಲಕ್ಷ್ಮೀಪತಿ ಜೋಯಿಸರು | ನಿರ್ದೇಶಕರು |
| 5. ಶ್ರೀ ಎಲ್.ಜಿ.ನಾರಾಯಣಗೌಡರು | ನಿರ್ದೇಶಕರು |
| 6. ಶ್ರೀ ಎಸ್.ಎಸ್.ಶಾಂತಹೃದಯರವರು | ನಿರ್ದೇಶಕರು |
| 7. ಶ್ರೀ ಎಸ್.ಸಿ.ರಾಮಲಿಂಗೇಗೌಡರು | ನಿರ್ದೇಶಕರು |
| 8. ಶ್ರೀ ಎಸ್.ಕೆ.ರಂಗಸ್ವಾಮಿಯವರು | ನಿರ್ದೇಶಕರು |
| 9. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು | ನಿರ್ದೇಶಕರು |

ಈ ಮಂಡಳಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದ್ದರಿಂದ ರೆಕಾರ್ಡ್ ಮಾಡಲಾಯಿತು.

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆ ನೀಡಲು ಅವಕಾಶ. | ಸಂಸ್ಥೆಯ ಸದಸ್ಯರಾದ ಕೆ.ಆರ್.ಪುಟ್ಟಸ್ವಾಮಿಯವರು ಮೊದಲಿಗೆ ಎಸ್.ಎಂ.ಲಿಂಗಪ್ಪನವರು ಮತ್ತು ಎಸ್.ಸಿ.ಚಿಕ್ಕಣ್ಣಗೌಡರನ್ನು ಸ್ಮರಿಸುತ್ತಾ ಗ್ರಾಮಭಾರತಿ |

| | | |
|---|---|---|
| | | ವಿದ್ಯಾಸಂಸ್ಥೆ, ಕೃಷ್ಣರಾಜಪೇಟೆಯಲ್ಲಿ ಪ್ರಶಸ್ತವಾದ ವಾತಾವರಣದಲ್ಲಿದ್ದು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡುತ್ತಿದ್ದು ಶಿಕ್ಷಕರೆ ಸಂಸ್ಥೆಯ ಆಧಾರ ಸ್ತಂಭಗಳಾಗಿದ್ದು ಉತ್ತಮ ಶಿಕ್ಷಣ ನೀಡುವಲ್ಲಿ ಮತ್ತು ಉತ್ತಮ ಫಲಿತಾಂಶ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಇಂದಿನ ದಿನಗಳಲ್ಲಿ ಶಿಕ್ಷಣ ಸಂಸ್ಥೆಗಳು ಹಣವನ್ನೇ ಸಂಪಾದನೆ ಮಾಡುವ ಗುರಿಯನ್ನು ಹೊಂದಿದ್ದು ಗ್ರಾಮಭಾರತಿ ವಿದ್ಯಾಸಂಸ್ಥೆಯು ಅದಕ್ಕೆ ಅಪವಾದವೆಂಬಂತಿದ್ದು ಎಲ್ಲಾ ಹಣಕಾಸಿನ ವ್ಯವಹಾರಗಳನ್ನು ಮತ್ತು ಲೆಕ್ಕಪತ್ರಗಳನ್ನು ಪಾರದರ್ಶಕವಾಗಿ ಎಲ್ಲಾ ಸಂದರ್ಭಗಳಲ್ಲಿ ಇಡಲಾಗಿರುತ್ತದೆ. ಇದು ಸಂಸ್ಥೆಯ ಆಡಳಿತ ಮಂಡಳಿಯ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು. ಸಂಸ್ಥೆ ಇದೇ ರೀತಿ ಉತ್ತಮವಾದ ಸಾಧನೆ ಮಾಡಲಿ ಹಾಗೂ ಸಂಸ್ಥೆಯ ಪ್ರಗತಿಗೆ ಶ್ರಮಿಸುತ್ತಿರುವ ಅಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.<br>ಮತ್ತೋರ್ವ ಸದಸ್ಯರಾದ ಪಾಪೇಗೌಡರು ಮಾತನಾಡಿ ಸಂಸ್ಥೆಯು 1974ರಲ್ಲಿ ಸ್ಥಾಪನೆಗೊಂಡು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವುದು ಹೆಮ್ಮೆಯ ವಿಷಯ ಎಂದು ಶ್ಲಾಘಿಸಿದರು. ಕೆಲವರು ಸಂಸ್ಥೆಯ ವಿರುದ್ಧವಾಗಿ ಅಪಪ್ರಚಾರವನ್ನು ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿದ್ದು ಅದರ ಬಗ್ಗೆ ನಾನು ಇಂದಿನ ಸಭೆಯಲ್ಲಿ ಹಾಜರಾಗಿ ಅಧ್ಯಕ್ಷರೊಡನೆ ಚರ್ಚಿಸಿ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಆಡಳಿತ ಮಂಡಳಿಯವರು ಎಲ್ಲಾ ಲೆಕ್ಕಪತ್ರಗಳನ್ನು ಬಹಳ ಪಾರದರ್ಶಕವಾಗಿ ಇಟ್ಟಿರುವುದು |

| | | |
|---|---|---|
| | | ನನ್ನ ಗಮನಕ್ಕೆ ಬಂತು. ಹೊರಗಿನವರು ಸಂಸ್ಥೆಯ ವಿರುದ್ಧ ಮಾಡಿರುವ ಆರೋಪಗಳು ಸುಳ್ಳು ಎಂಬುದಾಗಿ ತಿಳಿಯಿತು. ಬಹಳ ಅರ್ಥಪೂರ್ಣವಾದ, ಸಂಸ್ಥೆಯ ಅಭಿವೃದ್ಧಿಗೆ ಪೂರಕವಾದ ಚರ್ಚೆಗಳು ಇಂದಿನ ಸಭೆಯಲ್ಲಿ ನಡೆದವು ಎಂದು ಹೇಳಿದರು. ಸಂಸ್ಥೆಯು ಇನ್ನೂ ಬೆಳೆಯುವಲ್ಲಿ ಎಲ್ಲರೂ ಸಹಕಾರವನ್ನು ನೀಡಬೇಕೆಂದು ಕೋರಿ ತಮ್ಮ ಮಾತುಗಳನ್ನು ಮುಗಿಸಿದರು. |
| 10. | ಅಧ್ಯಕ್ಷರ ಭಾಷಣ | ಸಂಸ್ಥೆಯ ಅಧ್ಯಕ್ಷರು ಹಾಗೂ ಇಂದಿನ ವಾರ್ಷಿಕ ಮಹಾಸಭೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು ತಮ್ಮ ಅಧ್ಯಕ್ಷರ ಭಾಷಣದಲ್ಲಿ ಕಳೆದ ಸಾಲಿನಲ್ಲಿ ಸಂಸ್ಥೆಯ ವತಿಯಿಂದ ಹೊಸದಾಗಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದು ಸರಿಯಷ್ಟೆ. ಇದಕ್ಕೆ ಸಹಕರಿಸಿದ ಪ್ರತಿಯೊಬ್ಬರಿಗೂ ಅಭಿನಂದನೆಯನ್ನು ಸಲ್ಲಿಸಿದರು. ಕಳೆದ ಸಾಲಿಗೆ ಹೋಲಿಸಿದರೆ ಪ್ರಸಕ್ತ ಸಾಲಿನಲ್ಲಿ ಎಲ್ಲಾ ವಿಭಾಗಗಳಿಗೆ ದಾಖಲಾತಿಯು ಉತ್ತಮವಾಗಿದೆ ಎಂದು ತಿಳಿಸುತ್ತಾ ಇದಕ್ಕೆ ಕಾರಣಕರ್ತರಾದ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಬೋಧಕ, ಬೋಧಕೇತರ ವರ್ಗದ ವರ್ಗಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಸಂಸ್ಥೆಯ ಪಶ್ಚಿಮ ಭಾಗದಲ್ಲಿ ನಿರ್ಮಿಸಿರುವ ಸೈಕಲ್ ಸ್ಟ್ಯಾಂಡಿಗೆ ಕಲ್ನಾರು ಶೀಟುಗಳನ್ನು ಒದಗಿಸಿರುವ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಪುಟ್ಟಲಕ್ಷ್ಮಮ್ಮನವರಿಗೆ ಧನ್ಯವಾದಗಳು ತಿಳಿಸಿದರು. ನಂತರ ಪಾಪೇಗೌಡರು ಉಲ್ಲೇಖಿಸಿದ್ದ ಸಂಸ್ಥೆಯ ವಿರುದ್ಧವಾಗಿ ಮಾಡುತ್ತಿರುವ ಆರೋಪಗಳು ಏನಾದರೂ ಇದ್ದಲ್ಲಿ ಸಂಸ್ಥೆಯ ವಾರ್ಷಿಕ ಮಹಾಸಭೆಗೆ ಕಾಯದೆ ತಕ್ಷಣವೇ ಖುದ್ದಾಗಿ ತಮ್ಮನ್ನು ಅಥವಾ ಕಾರ್ಯಕಾರಿ ಮಂಡಳಿಯ ಇತರೆ ಸದಸ್ಯರುಗಳೊಂದಿಗೆ ಅಂತಹ ಆರೋಪಗಳನ್ನ ಚರ್ಚಿಸಲು ತಿಳಿಸಿದರು. ಆಗ ಅವರುಗಳ ಆರೋಪ ನಿಜವೋ ಸುಳ್ಳೋ ಎಂದು ತಿಳಿದು ಅದು ನಿಜವಾಗಿದ್ದರೆ ಅಗತ್ಯ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಿದರು. ನಾವೆಲ್ಲರೂ ಒಂದೆ, ಇದು ನಮ್ಮ ಸಂಸ್ಥೆ, |

| | | |
|---|---|---|
| | | ಇದನ್ನು ಬೆಳೆಸುವ ಜವಾಬ್ದಾರಿ ನಮ್ಮೆಲ್ಲರಿಗೂ ಸೇರಿದ್ದು, ಇದಕ್ಕಾಗಿ ತಮ್ಮೆಲ್ಲರ ಸಹಕಾರವನ್ನು ಬಯಸುತ್ತೇನೆ ಎಂದು ಹೇಳಿದರು. ಮುಂದುವರೆದು ಮಾತನಾಡುತ್ತಾ ಪ್ರಸಕ್ತ ಸಾಲಿನಿಂದ ಸಂಸ್ಥೆಯ ಡಿ.ಇಡಿ. ವಿಭಾಗಕ್ಕೆ ದಾಖಲಾತಿ ಇಲ್ಲದಿರುವುದರಿಂದ ಈ ವಿಭಾಗವನ್ನು ನಿಲ್ಲಿಸಲಾಗಿದೆ ಇದು ಬೇಸರದ ಸಂಗತಿ ಎಂದು ಹೇಳಿದರು. ಸಂಸ್ಥೆಯ ಅಭಿವೃದ್ಧಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಶ್ರಮಿಸುತ್ತಿರುವ ಎಲ್ಲಾ ನೌಕರವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. |
| 11. | ವಂದನಾರ್ಪಣೆ | ಪ್ರೌಢಶಾಲಾ ವಿಭಾಗದ ಸಹಶಿಕ್ಷಕರಾದ ಟಿ.ಸುರೇಶ್ ರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕರುಗಳು, ಸದಸ್ಯರು ಹಾಗೂ ಸಂಸ್ಥೆ ಎಲ್ಲಾ ಸಿಬ್ಬಂದಿವರ್ಗದವರಿಗೆ ವಂದನೆಗಳನ್ನು ಸಲ್ಲಿಸಿದರು. |
| 12. | ರಾಷ್ಟ್ರಗೀತೆ | ಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ತಾ॥ 27.07.2014 –ಸಹಿ–

ಸ್ಥಳ: ಗ್ರಾಮ ಭಾರತಿ ವಿದ್ಯಾಸಂಸ್ಥೆ ಆವರಣ (ಎಸ್.ಸಿ.ಕಿರಣ್ ಕುಮಾರ್)

ಕೆ.ಆರ್.ಪೇಟೆ.

## ಮಹಾಸಭೆ: 27

## 2014–15 ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ತಾ॥ 26.07.2015

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೃಷ್ಣರಾಜಪೇಟೆ, ಈ ವಿದ್ಯಾಸಂಸ್ಥೆಯ 2014–15 ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ: 26.7.2015ನೇ ಭಾನುವಾರ ಬೆಳಿಗ್ಗೆ 10:30 ಘಂಟೆಗೆ ಸರಿಯಾಗಿ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳು.

ಹಾಜರಿ :– ಹಾಜರಿಯಾಗಿದ್ದ ಸದಸ್ಯರ ಸಹಿಯನ್ನು ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ವಿದ್ಯಾಸಂಸ್ಥೆಯ ಹಿರಿಯ ಪ್ರಾಥಮಿಕ ಶಿಕ್ಷಕಿಯರಾದ ಶ್ರೀಮತಿ ಲೀಲಾವತಿ ಮತ್ತು ಶ್ರೀಮತಿ ಪ್ರೇಮರವರು ಪ್ರಾರ್ಥನೆ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ವಿದ್ಯಾಸಂಸ್ಥೆಯ ಪ್ರೌಢಶಾಲಾ ವಿಭಾಗದ ಮುಖ್ಯಶಿಕ್ಷಕರಾದ ಶ್ರೀ ಎಸ್.ಬಸವರಾಜಯ್ಯನವರು ಸಂಸ್ಥೆಯ ಗೌರ್ವಾನ್ವಿತ ಅಧ್ಯಕ್ಷರು, ಕಾರ್ಯದರ್ಶಿಗಳು, ಆಡಳಿತ ಮಂಡಳಿ ನಿರ್ದೇಶಕರುಗಳೂ, ಸರ್ವ ಸದಸ್ಯರು ಹಾಗೂ ಸಂಸ್ಥೆಯ ಎಲ್ಲಾ ಬೋಧಕ–ಬೋಧಕೇತರ ವರ್ಗದವರನ್ನ ಸ್ವಾಗತ ಮಾಡಿದರು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವುದು. | ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಸಂಸ್ಥೆಯ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪಿ.ಸುರೇಶ್ ರವರು ಓದಿದ್ದನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ಮಾಡಲಾಯಿತು. |
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು | ಹಿಂದಿನ ಮಹಾಸಭೆಯ ವರದಿಯನ್ನು ಪ್ರೌಢಶಾಲಾ ಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಓದಿದ್ದನ್ನ ಸಭೆಯು |

| | | |
|---|---|---|
| | | ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 5. | ಸಂಘದ ವರದಿಯನ್ನು ಮಂಡಿಸುವುದು. | 2014–15ನೇ ಸಾಲಿನಲ್ಲಿ ಸಂಸ್ಥೆಯು ಕೈಗೊಂಡ ಕಾರ್ಯಕ್ರಮಗಳನ್ನ ಪ್ರೌಢಶಾಲಾ ಶಿಕ್ಷಕರಾದ ಹೆಚ್.ಎನ್.ವಜ್ರಪ್ರಸಾದ್ ರವರು ರೆಕಾರ್ಡ್ ಮಾಡಿಕೊಂಡು ಅದರ ಜೊತೆಜೊತೆಗೆ ಸಾಧನೆಗಳ ವಿವರಗಳನ್ನು ವಿಡಿಯೋ ಚಿತ್ರಣಗಳಿಂದ ಭಿತ್ತರಿಸಲಾಯಿತು. ಇದನ್ನ ಸಭೆಯು ವೀಕ್ಷಿಸಿ, ಕೇಳಿ ಮತ್ತು ಚರ್ಚಿಸಿ ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 6. | 2014–15ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | 2014–15ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಹೆಚ್.ಎಸ್.ಕೃಷ್ಣ ರವರು ಮಂಡಿಸಿದರು. ಈ ವರದಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದರಿಂದ ಇದನ್ನ ರೆಕಾರ್ಡ್ ಮಾಡಲಾಯಿತು. |
| 7. | 2015–16ನೇ ಸಾಲಿನ ಬಡ್ಜೆಟ್ ಮಂಜೂರು ಮಾಡುವುದು. | ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ. ಹುಚ್ಚೇಗೌಡರು 2015–16ನೇ ಸಾಲಿನ ಬಡ್ಜೆಟ್ ನ್ನ ಮಂಡಿಸಿದರು. |

**2015–2016ನೇ ಸಾಲಿನ ಬಡ್ಜೆಟ್ ಮಂಜುರಾತಿ ವಿವರ.**

| ಕ್ರ.ಸಂ. | ವಿವರ | **2014–15ನೇ ಸಾಲಿಗೆ ಮಂಜೂರಾಗಿರುವುದು** | **2014–15ನೇ ಸಾಲಿಗೆ ಖರ್ಚಾಗಿರುವುದು** | **2015–16ನೇ ಸಾಲಿಗೆ ಮಂಜೂರಾತಿ ಕೋರಿರುವುದು.** |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 30,00,000–00 | 25,20,511–00 | 35,00,000–00 |
| 2 | ವಾರ್ಷಿಕ ವಿದ್ಯುಚ್ಛಕ್ತಿ | 50,000–00 | 51,268–00 | 75,000–00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000–00 | 10,200–00 | 50,000–00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 25,000–00 | 9,000–00 | 25,000–00 |
| 5 | ಪ್ರಯಾಣ ಭತ್ಯೆ | 25,000–00 | ---- | 25,000–00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 1,00,000–00 | 13,290–00 | 1,00,000–00 |
| 7 | ಅಂಚೆ ವೆಚ್ಚ | 5,000–00 | 650–00 | 5,000–00 |

| | | | | |
|---|---|---|---|---|
| 8 | ಅನಿರೀಕ್ಷಿತ ವೆಚ್ಚ | 50,000–00 | 49,945–00 | 1,00,000–00 |
| 9 | ಜಾಹಿರಾತು ವೆಚ್ಚ | 25,000–00 | ---- | 50,000–00 |
| 10 | ಫರ್ನೀಚರ್ ವೆಚ್ಚ | 2,00,000–00 | 1,10,498–00 | 2,00,000–00 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 75,000–00 | 82,968–00 | 1,50,000–00 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 10,00,000–00 | 7,06,668–00 | 30,00,000–00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 1,20,000–00 | ---- | 1,20,000–00 |
| 14 | ಸ್ಥಿರ ನಿಧಿಗಾಗಿ | 5,00,000–00 | 6,00,000–00 | 10,00,000–00 |
| 15 | ಬಿ.ಇಡಿ., ಪಿ.ಯು.ಸಿ. ನವೀಕರಣ ಶುಲ್ಕ ಪಾವತಿಸಲು | 1,50,000–00 | 1,15,201–00 | 1,50,000–00 |
| | **ಒಟ್ಟು** | **53,75,000–00** | **42,70,199–00** | **84,50,000–00** |

ಮೇಲ್ಕಂಡಂತೆ ಬಡ್ಜೆಟ್ ಮಂಜೂರು ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯ್ತು.

| | | |
|---|---|---|
| 8. | 2015–16ನೇ ಸಾಲಿಗೆ ಆಡಳಿತ ಮಂಡಳಿ ರಚನೆ. | 2015–16ನೇ ಸಾಲಿಸ ಆಡಳಿತ ಮಂಡಳಿಯ ಸದಸ್ಯರ ಹೆಸರು ಹಾಗೂ ಪದನಾಮಗಳನ್ನ ಕಾರ್ಯದರ್ಶಿ ಕೆ.ಜಿ.ಹುಚ್ಚೇಗೌಡರ ಪರವಾಗಿ ಎ.ಪ್ರದೀಪರವರು ಮಂಡಿಸಿದರು. |

| ಹೆಸರು | ಪಧನಾಮ |
|---|---|
| 1. ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು | ಅಧ್ಯಕ್ಷರು |
| 2. ಶ್ರೀ ಕೆ.ಜಿ.ಹುಚ್ಚೇಗೌಡರು | ಕಾರ್ಯದರ್ಶಿಗಳು |
| 3. ಶ್ರೀ ಎ.ಎಂ.ನಂಜುಂಡೇಗೌಡರು | ನಿರ್ದೇಶಕರು |
| 4. ಶ್ರೀ ಬಿ.ಎಸ್.ಲಕ್ಷ್ಮೀಪತಿ ಜೋಯಿಸರು | ನಿರ್ದೇಶಕರು |
| 5. ಶ್ರೀ ಎಲ್.ಜಿ.ನಾರಾಯಣಗೌಡರು | ನಿರ್ದೇಶಕರು |
| 6. ಶ್ರೀ ಎಸ್.ಎಸ್.ಶಾಂತಹೃದಯರವರು | ನಿರ್ದೇಶಕರು |
| 7. ಶ್ರೀ ಎಸ್.ಸಿ.ರಾಮಲಿಂಗೇಗೌಡರು | ನಿರ್ದೇಶಕರು |
| 8. ಶ್ರೀ ಎಸ್.ಕೆ.ರಂಗಸ್ವಾಮಿಯವರು | ನಿರ್ದೇಶಕರು |
| 9. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು | ನಿರ್ದೇಶಕರು |

ಈ ಮಂಡಳಿಗೆ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸತಕ್ಕದ್ದೆಂದು ತೀರ್ಮಾನಿಸಿತು.

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆ ನೀಡಲು ಅವಕಾಶ. | ಸಂಸ್ಥೆಯ ಸದಸ್ಯರಾದ ಶ್ರೀ ಕೆ.ಆರ್.ಪುಟ್ಟಸ್ವಾಮಿಯವರು ಶಾರದಾ ಮಾತೆಗೆ ನಮಿಸುತ್ತಾ, ಎಸ್.ಎಂ.ಲಿಂಗಪ್ಪನವರು ಮತ್ತು ಎಸ್.ಸಿ.ಚಿಕ್ಕಣ್ಣಗೌಡರನ್ನ ಸ್ಮರಿಸುತ್ತಾ, ಸಂಸ್ಥೆಯು ಹಿಂದಿನ ವರ್ಷಗಳ ಸಾಧನೆಗಳನ್ನು ಚಿತ್ರಗಳ ಮೂಲಕ ಮಾಡಿರುವುದನ್ನ ಮತ್ತೊಮ್ಮೆ ನೋಡಬೇಕು ಎನ್ನುವ ರೀತಿ ಇದೆ. ಹಾಗೂ ಸಂಸ್ಥೆ ಇಷ್ಟು ಬೃಹದಾಕಾರವಾಗಿ ಬೆಳೆಯಲು ಯುವ ಅಧ್ಯಕ್ಷರಾದ ಎಸ್.ಸಿ.ಕಿರಣ್ ಕುಮಾರ್ ರವರು ತುಂಬಾ ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಹಾಗೂ ಅವರಿಗೆ ಎಲ್ಲಾ ರೀತಿಯ ಪ್ರೋತ್ಸಾಹವನ್ನು ನೀಡುತ್ತಿರುವ ಶ್ರೀಮತಿ ಪುಟ್ಟಲಕ್ಷ್ಮಮ್ಮನವರು ಹಾಗೂ ಆಡಳಿತ ಮಂಡಳಿ ಯವರನ್ನ ಅಭಿನಂದಿಸಿದರು. ಸಂಸ್ಥೆಯು ಒಳ್ಳೆಯ ಸ್ಥಳದಲ್ಲಿದ್ದು ಹೆದ್ದಾರಿಯಾಗಿ ಹೊಂದಿಕೆಯಾಗಿದೆ. ತುಂಬಾ ಹೆಮ್ಮರವಾಗಿ ಬೆಳೆದು ಮಂಡ್ಯ ಜಿಲ್ಲೆಯಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿರುತ್ತದೆ. ನಿವೃತ್ತಿ ಹೊಂದಿದಂತಹ ಶಿಕ್ಷಕರುಗಳಿಗೆ ಮಹಾಸಭೆಯಲ್ಲಿ ಸನ್ಮಾನವನ್ನ ಹಮ್ಮಿ ಕೊಳ್ಳಲು ಸಲಹೆ ನೀಡಿದರು. ಪಿ.ಯು.ಸಿ ವಿಭಾಗದಲ್ಲಿ ವಿಜ್ಞಾನ ಕಾಲೇಜನ್ನು ಪ್ರಾರಂಭಿಸಿ ಎಂದು ಸಲಹೆ ನೀಡಿದರು. ಸಂಸ್ಥೆಯ ನೌಕರರುಗಳಿಗೆ ಸದರಿ ಸಾಲಿನಲ್ಲಿ ಉತ್ತಮವಾದ ಸಂಬಳವನ್ನು ನೀಡಿರುವುದು ಸಂತೋಷ ವನ್ನು ಉಂಟು ಮಾಡಿದೆ ಎಂದು ತಿಳಿಸಿದರು. ಅಕ್ಷರ ದಾಸೋಹಕ್ಕೆ ಸಂಬಂಧಿಸಿದಂತೆ ಬಿಸಿಯೂಟದ ಅಕ್ಷರ ದಾಸೋಹದಡಿಯಲ್ಲಿ ಅಡುಗೆ ಮನೆ ಕೊಠಡಿಯನ್ನ ಅನುದಾನವನ್ನ ಪಡೆದುಕೊಳ್ಳಲು ಸಲಹೆ ನೀಡಿದರು. |

| | | |
|---|---|---|
| | | ಮತ್ತೊಬ್ಬ ಸದಸ್ಯರಾದ ಶ್ರೀ ರಾಮ್ ಪ್ರಸಾದ್ ರವರು ಮಾತನಾಡಿ, ಭಾರತೀಯ ಸಂಸ್ಕೃತಿಯ ಯೋಗವನ್ನ ಪ್ರಪಂಚದಲ್ಲೆಡೆ ಮಾನ್ಯತೆ ನೀಡಿ ಅನುಸರಿಸುತ್ತಿರುವಾಗ ನಮ್ಮ ಸಂಸ್ಥೆಯಲ್ಲಿ ಯೋಗ ಶಿಕ್ಷಣಕ್ಕೆ ಒತ್ತು ನೀಡಿದರೆ ಮಕ್ಕಳು ಹಾಗೂ ಸಿಬ್ಬಂದಿ ವರ್ಗದವರ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು. |
| 10. | ಅಧ್ಯಕ್ಷರ ಭಾಷಣ | ಸಂಸ್ಥೆಯ ಅಧ್ಯಕ್ಷರು ಹಾಗೂ ಇಂದಿನ ಮಹಾಸಭೆಯ ಅಧ್ಯಕ್ಷರಾದ ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು ತಮ್ಮ ಅಧ್ಯಕ್ಷರ ಭಾಷಣದಲ್ಲಿ 2014–15ನೇ ಸಾಲಿನಲ್ಲಿ ಸಂಸ್ಥೆಯಲ್ಲಿ ನಡೆದಿರುವ ಎಲ್ಲಾ ಕಾರ್ಯಕ್ರಮಗಳ ಯಶಸ್ಸಿನ ಸಾಧನೆಗೆ ಶ್ರಮಿಸಿದ ಸಂಸ್ಥೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಆಡಳಿತ ಮಂಡಳಿಯ ಪರವಾಗಿ ಅಭಿನಂದನೆಗಳನ್ನ ಸಲ್ಲಿಸಿದರು. ಮುಂದುವರೆದು ಮಾತನಾಡುತ್ತಾ ಕೆ.ಆರ್.ಪುಟ್ಟಸ್ವಾಮಿ ಯವರ ಸಲಹೆಗೆ ಅಕ್ಷರ ದಾಸೋಹ ಅಡುಗೆ ಮನೆಯ ಕೊಠಡಿಗೆ ಸರ್ಕಾರದಿಂದ ಬಿಡುಗಡೆಯಾಗಿದ್ದಂತಹ ಅನುದಾನವನ್ನು ಸರ್ಕಾರಕ್ಕೆ ವಾಪಸ್ ನೀಡಲಾಗಿದೆ. ಸರ್ಕಾರದ ನೀಲ ನಕ್ಷೆಯಂತೆ ಸಂಸ್ಥೆಯಲ್ಲಿ ಕಟ್ಟಡ ನಿರ್ಮಿಸಲು ಸ್ಥಳಾವಕಾಶ ಹಾಗೂ ಅಗತ್ಯತೆ ಇಲ್ಲದ್ದರಿಂದ ಮಾನ್ಯ ನಿರ್ದೇಶಕರು ಅಕ್ಷರ ದಾಸೋಹ ಹಾಗೂ ಜಿಲ್ಲಾ ಪಂಚಾಯತ್ ಗೆ ಲಿಖಿತವಾಗಿ ಕೆಲವೊಂದು ಮಾರ್ಪಾಡುಗಳನ್ನ ಮಾಡಲು ಕೇಳಿಕೊಂಡಿದ್ದೆವು. ಆದರೆ ಅದಕ್ಕೆ ಅವರು ಸಮ್ಮತಿಯನ್ನ ಸೂಚಿಸದ ಕಾರಣ ಅನುದಾನವನ್ನ ಹಿಂತಿರುಗಿಸಿ ಸಂಸ್ಥೆಯ ವತಿಯಿಂದ ಸದರಿ ಕಾಮಗಾರಿಯನ್ನ ಪೂರ್ಣ ಮಾಡಲಾಗಿದೆ |

| | | |
|---|---|---|
| | | ಹಾಗೂ ಸಂಸ್ಥೆಯು ಸ್ವಾವಲಂಬಿಯಾಗಿ ಕರ್ತವ್ಯ ನಿರ್ವಹಿಸಲಾಗುತ್ತಿರುವುದರಿಂದ ಅದನ್ನ ಸ್ಥಗಿತಗೊಳಿಸ ಲಾಯಿತು. ವಿಜ್ಞಾನ ಕಾಲೇಜಿಗೆ ಸಂಬಂಧಪಟ್ಟಂತೆ, ಸಂಸ್ಥೆಯಲ್ಲಿ 2008ನೇ ಇಸವಿಯಿಂದ ವಿಜ್ಞಾನ ವಿಭಾಗವನ್ನು ಮುಚ್ಚಲಾಗಿತ್ತು, ಅದನ್ನ ಪುನಃ ಪ್ರಾರಂಭಿ ಸಲು ಇಲಾಖೆಯೊಡನೆ ವ್ಯವಹರಿಸಿದಾಗ ಒಮ್ಮೆ ಮುಚ್ಚಿದ ವಿಭಾಗವನ್ನ ಮತ್ತೆ ತೆರೆಯಲು ಅವಕಾಶವಿಲ್ಲ ಎಂದು ತಿಳಿಸಿದರು. ಆದುದರಿಂದ ವಿಜ್ಞಾನ ವಿಭಾಗದ ಮಹತ್ವವನ್ನು ಅರಿತು ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್ ನ ವತಿಯಿಂದ ವಿಜ್ಞಾನ ವಿಭಾಗವನ್ನು ತೆರೆದು ಸಂಸ್ಥೆಯಿಂದ ಕೊಠಡಿಗಳನ್ನ ಬಾಡಿಗೆ ನೀಡಲಾಗಿದೆ ಎಂದು ತಿಳಿಸಿದರು. ನಂತರ ಶ್ರೀರಾಮ್ ಪ್ರಸಾದ್ ರವರ ಸಲಹೆಯನ್ನ ಸ್ವೀಕರಿಸುತ್ತಾ, ಯೋಗ ಶಿಕ್ಷಣವನ್ನು ಸಂಸ್ಥೆಯಲ್ಲಿ ನೀಡಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ಭರವಸೆ ನೀಡಿದರು. ಮುಂದುವರೆದು ಮಾತನಾಡುತ್ತಾ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಎಸ್.ಎಂ.ಲಿಂಗಪ್ಪನವರ ಜನ್ಮ ಶತಾಬ್ದಿಯನ್ನು 2018ಕ್ಕೆ ಆಚರಿಸಲು ತೀರ್ಮಾನಿಸಿ ಒಂದು ಸಮಿತಿಯನ್ನ ರಚಿಸಲಾಗಿದೆ. ಆ ಸಮಿತಿಯ ವತಿಯಿಂದ ವಿವಿಧ ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳಲು ತೀರ್ಮಾನಿಸಿ ಒಂದು ಬ್ಯಾಂಕ್ ಖಾತೆಯನ್ನು ಸಹ ತೆರೆದು ಸಂಸ್ಥೆಯಲ್ಲಿ ದಾಖಲಾಗುವ ಪ್ರತಿ ಮಕ್ಕಳಿಂದ 200 ರೂಪಾಯಿಗಳನ್ನು ಪಡೆದು ಸದರಿ ಖಾತೆಯಲ್ಲಿ ಜಮಾ ಮಾಡಲಾಗುತ್ತಿದೆ. ಈ ಖಾತೆಯ ಲೆಕ್ಕಪತ್ರವನ್ನ ಅಲಾಯಿದ ಮಾಡಿಕೊಳ್ಳಲಾಗುತ್ತದೆ. ಸಂಸ್ಥೆಯ ಸದಸ್ಯರುಗಳು ಸಹ ಈ ಜನ್ಮ ಶತಾಬ್ದಿ ಕಾರ್ಯಕ್ರಮಕ್ಕೆ ದೇಣಿಗೆ |

| | | |
|---|---|---|
| | | ನೀಡುವುದಾದರೆ ಸಂಸ್ಥೆಗೆ ಪಾವತಿಸಿ ರಶೀತಿಯನ್ನ ಪಡೆಯಲು ತಿಳಿಸಿದರು. |
| 11. | ವಂದನಾರ್ಪಣೆ | ಸಂಸ್ಥೆಯ ಪಿ.ಯು. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಹೆಚ್.ಟಿ.ನಾಗರಾಜೇಗೌಡರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಕಾರ್ಯದರ್ಶಿಗಳು, ನಿರ್ದೇಶಕರು, ಸದಸ್ಯರು ಹಾಗೂ ಸಂಸ್ಥೆ ಎಲ್ಲಾ ಸಿಬ್ಬಂದಿವರ್ಗದವರಿಗೆ ವಂದನೆಗಳನ್ನ ಸಲ್ಲಿಸಿದರು. |
| 12. | ರಾಷ್ಟ್ರಗೀತೆ | ಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದುನಿಂತು ಗೌರವಯುತವಾಗಿ ರಾಷ್ಟ್ರಗೀತೆಯನ್ನ ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ತಾ॥ 26.07.2015

ಸ್ಥಳ: ಗ್ರಾಮ ಭಾರತಿ ವಿದ್ಯಾಸಂಸ್ಥೆ ಆವರಣ

ಕೆ.ಆರ್.ಪೇಟೆ.

–ಸಹಿ–

(ಎಸ್.ಸಿ.ಕಿರಣ್ ಕುಮಾರ್)

## ಮಹಾಸಭೆ: 28

## 2015–16 ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ

## ತಾ॥ 31.07.2016

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೃಷ್ಣರಾಜಪೇಟೆ, ಈ ವಿದ್ಯಾಸಂಸ್ಥೆಯ 2015–16 ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ: 31.07.2016ನೇ ಭಾನುವಾರ ಬೆಳಿಗ್ಗೆ 10:30 ಘಂಟೆಗೆ ಸರಿಯಾಗಿ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಘನ ಅಧ್ಯಕ್ಷರಾದ ಶ್ರೀಮಾನ್ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳು.

ಹಾಜರಿ :– ಹಾಜರಿಯಾಗಿದ್ದ ಸದಸ್ಯರ ಸಹಿಯನ್ನು ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ವಿದ್ಯಾಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯಾದ ಶ್ರೀಮತಿ ಲೀಲಾವತಿ ಪ್ರಾರ್ಥನೆ ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ವಿದ್ಯಾಸಂಸ್ಥೆಯ ಪ್ರೌಢಶಾಲಾ ವಿಭಾಗದ ನಿವೃತ್ತ ಮುಖ್ಯಶಿಕ್ಷಕರಾದ ಶ್ರೀ ಎಸ್.ಬಸವರಾಜಯ್ಯನವರು ಸಂಸ್ಥೆಯ ಗೌರನ್ವಿತ ಅಧ್ಯಕ್ಷರು, ಕಾರ್ಯದರ್ಶಿಗಳು, ಆಡಳಿತ ಮಂಡಳಿ ನಿರ್ದೇಶಕರು, ಸರ್ವ ಸದಸ್ಯರು ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ಬೋಧಕ–ಬೋಧಕೇತರ ವರ್ಗದವರನ್ನ ತುಂಬು ಹೃದಯದಿಂದ ಸ್ವಾಗತಿಸಿದರು. |
| 3. | ಸಂಸ್ಥೆಯ ನಿರ್ದೇಶಕರಾದ ಶ್ರೀಯುತ ಲಕ್ಷ್ಮಿಪತಿಜೋಯಿಸ್ ರವ ಆತ್ಮಕ್ಕೆ ಶಾಂತಿ ಕೋರಿ ಮೌನ ಆಚರಿಸುವುದು. | ಸಂಸ್ಥೆಯ ಹಿರಿಯ ನಿರ್ದೇಶಕರಾದ ಪೂಜ್ಯ ಶ್ರೀಯುತ ಬಿ.ಎಸ್.ಲಕ್ಷ್ಮಿಪತಿ ಜೋಯಿಸ್ ರವರ ಆತ್ಮಕ್ಕೆ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ, ನಿರ್ದೇಶಕರು & ಸದಸ್ಯರು ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ಬೋಧಕ– |

| | | |
|---|---|---|
| | | ಬೋಧಕೇತರ ವರ್ಗದವರೆಲ್ಲಾ ಶಾಂತಿಯನ್ನು ಕೋರಿ ಮೌನ ಆಚರಿಸಲಾಯಿತು. |
| 4. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವ ವಿಚಾರ. | ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪಿ.ಸುರೇಶ್ ರವರು 2015-16 ರ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಓದಿದ್ದನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 5. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು | ಹಿಂದಿನ ಮಹಾಸಭೆಯ ವರದಿಯನ್ನು ಪ್ರೌಢಶಾಲಾ ಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಓದಿದ್ದನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 5. | ಸಂಘದ ವರದಿಯನ್ನು ಮಂಡಿಸುವುದು. | 2015-16ನೇ ಸಾಲಿನಲ್ಲಿ ಸಂಸ್ಥೆಯು ಕೈಗೊಂಡ ಕಾರ್ಯಕ್ರಮಗಳನ್ನ ಪ್ರೌಢಶಾಲಾ ವಿಭಾಗದ ಶಿಕ್ಷಕರಾದ ಹೆಚ್.ಎನ್.ವಜ್ರಪ್ರಸಾದ್ ರವರು ರೆಕಾರ್ಡ್ ಮಾಡಿ ಕೊಂಡು ಅದರ ಜೊತೆಗೆ ಸಾಧನೆಗಳ ವಿವರಗಳನ್ನು ವಿಡಿಯೋ ಚಿತ್ರಣಗಳಿಂದ ಭಿತ್ತರಿಸಲಾಯಿತು. ಈ ವರದಿಯನ್ನ ಸಭೆಯು ವೀಕ್ಷಿಸಿ, ಕೇಳಿ ಮತ್ತು ಚರ್ಚಿಸಿ ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ಸಭೆಯು ತೀರ್ಮಾನಿಸಿತು.<br>ಈ ಸಂದರ್ಭದಲ್ಲಿ ಟ್ರ್ಯಾಕ್ ಕಾಮಗಾರಿ ಕೆಲಸವನ್ನ ಕಡಿಮೆ ಅವಧಿಯಲ್ಲಿ ಹಾಗೂ ಸಂಸ್ಥೆಗೆ ಹೆಚ್ಚು ಹೊರೆಯನ್ನ ಭರಿಸದೇ ಪೂರ್ಣ ಮಾಡಿಕೊಟ್ಟ ಶ್ರೀ ರಮೇಶ್.ಎನ್ ಪ್ರಥಮ ದರ್ಜೆ ಗುತ್ತಿಗೆದಾರರು ಕೆ.ಆರ್.ಪೇಟೆ ಇವರಿಗೆ ಸಭೆಯಲ್ಲಿ ಗೌರವ ಸಮರ್ಪಣೆಯನ್ನ ಅಧ್ಯಕ್ಷರು ಮತ್ತು ಆಡಳಿತ |

| | | |
|---|---|---|
| | | ಮಂಡಳಿಯವರು ಸರ್ವ ಸದಸ್ಯರ ಸಮ್ಮುಖದಲ್ಲಿ ಮಾಡಿದರು ಇದಕ್ಕೆ ಸಭೆಯು ಸಂತೋಷ ವ್ಯಕ್ತಪಡಿಸಿತು. |
| 6. | 2015–16ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | 2015–16ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಪ್ರೌಢಶಾಲಾ ವಿಭಾಗದ ಪ್ರಭಾರಿ ಮುಖ್ಯಶಿಕ್ಷಕರಾದ ಹೆಚ್.ಎಸ್.ಕೃಷ್ಣ ರವರು ಮಂಡಿಸಿದರು. ಈ ವರದಿಗೆ ಒಪ್ಪಿಗೆ ನೀಡಿದ್ದರಿಂದ ಇದನ್ನ ಅಂಗೀಕರಿಸತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಿತು. |
| 7. | 2016–17ನೇ ಸಾಲಿನ ಬಡ್ಜೆಟ್ ಮಂಜೂರು ಮಾಡುವುದು. | ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ. ಹುಚ್ಚೇಗೌಡರು 2016–17ನೇ ಸಾಲಿನ ಬಡ್ಜೆಟ್ ನ್ನ ಮಂಡಿಸಿದರು. |

**2016–2017ನೇ ಸಾಲಿನ ಬಡ್ಜೆಟ್ ಮಂಜುರಾತಿ ವಿವರ.**

| ಕ್ರ.ಸಂ. | ವಿವರ | 2015–16ನೇ ಸಾಲಿಗೆ ಮಂಜೂರಾಗಿರುವುದು | 2015–16ನೇ ಸಾಲಿಗೆ ಖರ್ಚಾಗಿರುವುದು | 2016–17ನೇ ಸಾಲಿಗೆ ಮಂಜೂರಾತಿ ಕೋರಿರುವುದು. |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 35,00,000–00 | 27,17,274–00 | 35,00,000–00 |
| 2 | ವಾರ್ಷಿಕ ವಿದ್ಯುಚ್ಛಕ್ತಿ | 75,000–00 | 30,356–00 | 75,000–00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000–00 | 19,350–00 | 50,000–00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 25,000–00 | –––– | 50,000–00 |
| 5 | ಪ್ರಯಾಣ ಭತ್ಯೆ | 25,000–00 | –––– | 25,000–00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 1,00,000–00 | 1,11,311–00 | 2,00,000–00 |
| 7 | ಅಂಚೆ ವೆಚ್ಚ | 5,000–00 | 650–00 | 5,000–00 |
| 8 | ಅನಿರೀಕ್ಷಿತ ವೆಚ್ಚ | 1,00,000–00 | 90,045–00 | 1,50,000–00 |
| 9 | ಜಾಹಿರಾತು ವೆಚ್ಚ | 50,000–00 | 5,000–00 | 25,000–00 |
| 10 | ಫರ್ನೀಚರ್ ವೆಚ್ಚ | 2,00,000–00 | 4,000–00 | 2,00,000–00 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 1,50,000–00 | 1,22,957–00 | 2,00,000–00 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 30,00,000–00 | 24,20,654–00 | 5,00,000–00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 1,20,000–00 | –––– | 1,60,000–00 |
| 14 | ಸ್ಥಿರ ನಿಧಿಗಾಗಿ | 10,00,000–00 | 12,00,000–00 | 10,00,000–00 |
| 15 | ಬಿ.ಇಡಿ., ಪಿ.ಯು.ಸಿ. ನವೀಕರಣ ಶುಲ್ಕ ಪಾವತಿಸಲು | 1,50,000–00 | 1,08,450–00 | 2,00,000–00 |
| | **ಒಟ್ಟು** | **84,50,000–00** | **68,30,047–00** | **63,40,000–00** |

ಮೇಲ್ಕಂಡ ಬಡ್ಜೆಟ್ ನ್ನ ಮಂಜೂರು ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

| | | |
|---|---|---|
| 9. | 2016–17ನೇ ಸಾಲಿಗೆ ಆಡಳಿತ ಮಂಡಳಿ ರಚನೆ. | 2016–17ನೇ ಸಾಲಿನ ಆಡಳಿತ ಮಂಡಳಿಯ ಸದಸ್ಯರು ಹೆಸರು ಹಾಗೂ ಪದನಾಮಗಳನ್ನ ಕಾರ್ಯದರ್ಶಿಯವರಾದ ಕೆ.ಜಿ.ಹುಚ್ಚೇಗೌಡರ ಪರವಾಗಿ ಶ್ರೀಮತಿ ಜಯಶ್ರೀರವರು ಮಂಡಿಸಿದರು. |

| | ಹೆಸರು | ಪಧನಾಮ |
|---|---|---|
| 1. | ಶ್ರೀ ಎಸ್.ಸಿ.ಕಿರಣ್ ಕುಮಾರ್ ರವರು | ಅಧ್ಯಕ್ಷರು |
| 2. | ಶ್ರೀ ಕೆ.ಜಿ.ಹುಚ್ಚೇಗೌಡರು | ಕಾರ್ಯದರ್ಶಿಗಳು |
| 3. | ಶ್ರೀ ಎ.ಎಂ.ನಂಜುಂಡೇಗೌಡರು | ನಿರ್ದೇಶಕರು |
| 4. | ಶ್ರೀ ಎಸ್.ಸಿ.ರಾಮಲಿಂಗೇಗೌಡರು | ನಿರ್ದೇಶಕರು |
| 5. | ಶ್ರೀ ಎಸ್.ಎಸ್.ಶಾಂತಹೃದಯರವರು | ನಿರ್ದೇಶಕರು |
| 6. | ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರು | ನಿರ್ದೇಶಕರು |
| 7. | ಶ್ರೀ ಟಿ.ಸುರೇಶ್ ರವರು | ನಿರ್ದೇಶಕರು |
| 8. | ಶ್ರೀ ಎಲ್.ಎನ್.ಯಶ್ವಂತ್ ಕುಮಾರ್ ರವರು | ನಿರ್ದೇಶಕರು |
| 9. | ಶ್ರೀ ಎಂ.ಜಿ.ಪರಮೇಶ್ ರವರು | ನಿರ್ದೇಶಕರು |

ಈ ಆಡಳಿತ ಮಂಡಳಿಗೆ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸತಕ್ಕದ್ದೆಂದು ತೀರ್ಮಾನಿಸಿತು.

| | | |
|---|---|---|
| 10. | ಅಧ್ಯಕ್ಷರ ಭಾಷಣ | ಗೌರವಾನ್ವಿತ ಅಧ್ಯಕ್ಷರು ಸಭೆಯಲ್ಲಿದ್ದ ನಿರ್ದೇಶಕರು, ಸದಸ್ಯರು ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ಭೋದಕ ಮತ್ತು ಬೋಧಕೇತರ ವರ್ಗದವರಿಗೆ ಅಭಿನಂದಿಸುತ್ತಾ, ಕಳೆದ ಸಾಲಿನಲ್ಲಿ ಸಂಸ್ಥೆಯು 30 ಲಕ್ಷಕ್ಕೂ ಹೆಚ್ಚು ಹಣವನ್ನ ಸಂಸ್ಥೆಯ ಅಭಿವೃದ್ಧಿ ಕಾಮಗಾರಿಗೆ ಬಳಸಿದ್ದು ಹಾಗೂ ಈ ಎಲ್ಲಾ ಕಾಮಗಾರಿಗಳನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಿದ್ದು ಇದಕ್ಕೆ ಸಹಕಾರ |

| | | |
|---|---|---|
| | | ನೀಡಿದ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು. ಪ್ರಥಮವಾಗಿ ನನ್ನ ಸಹಪಾಠಿಗಳು, ಸ್ನೇಹಿತರು ಮತ್ತು ಸಂಸ್ಥೆಯ ಹಳೇ ವಿದ್ಯಾರ್ಥಿಯಾದ ಶ್ರೀಯುತ ರಮೇಶ್ ರವರು ಕಾಮಗಾರಿಯ ಸಂಪೂರ್ಣ ಜವಾಬ್ದಾರಿಯನ್ನ ತೆಗೆದುಕೊಂಡು ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಕೆಲಸ ಮಾಡಿರುತ್ತಾರೆ. ಅವರಿಗೆ ತಮ್ಮೆಲ್ಲರ ಪರವಾಗಿ ಸಂಸ್ಥೆಯ ಆಡಳಿತ ಮಂಡಳಿಯ ಪರವಾಗಿ ಅಭಿನಂದನೆಗಳನ್ನ ತಿಳಿಸಿದರು ಹಾಗೂ ಸಂಸ್ಥೆಯ ಇತಿಹಾಸದಲ್ಲಿ ಆದಂತಹ ಅಭಿವೃದ್ಧಿ ಕಾಮಗಾರಿಗಳು ಹಿಂದೆಂದೂ ಆಗಿರುವುದಿಲ್ಲವೆಂದು ಹೇಳುತ್ತಾ ಸದರಿ ವರ್ಷದ ಅಭಿವೃದ್ಧಿ ಕಾರ್ಯವನ್ನು ಸುವರ್ಣಾಕ್ಷರದಲ್ಲಿ ಬರೆಯಬಹುದಾಗಿದೆ ಎಂದು ತಿಳಿಸಿದರು. ಹಾಗೆಯೇ ಮುಂದುವರೆಯುತ್ತಾ ಕಳೆದ ಸಾಲಿನ ಮಹಾಸಭೆಯಲ್ಲಿ ರಾಮ್ ಪ್ರಸಾದ್ ರವರು ಯೋಗ ಶಿಕ್ಷಣವನ್ನು ಮಕ್ಕಳಿಗೆ ಅಳವಡಿಸಲು ತಿಳಿಸಿದ್ದರು. ಅದರಂತೆ ಕಳೆದ ಸಾಲಿನಲ್ಲಿಯೇ ಸುಮಾರು 45 ದಿನಗಳ ಕಾಲ ಯೋಗ ಶಿಕ್ಷಣವನ್ನ ಹಮ್ಮಿಕೊಳ್ಳಲಾಗಿತ್ತು. ಅದಲ್ಲದೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಮತ್ತು ಶಾಂತಿವನ ಟ್ರಸ್ಟ್ ಧರ್ಮಸ್ಥಳ ಇವರ ಸಹಯೋಗದೊಂದಿಗೆ ಕೆ.ಆರ್.ಪೇಟೆ ತಾಲೂಕಿನಲ್ಲಿ ಏಕಕಾಲದಲ್ಲಿ 100 ಸ್ಥಳಗಳಲ್ಲಿ ಯೋಗ ಶಿಬಿರಗಳನ್ನ ಆಯೋಜನೆ ಮಾಡಲಾಗಿದ್ದು ಅದಕ್ಕೆ ಯೋಗ ಶಿಕ್ಷಕರ ತರಬೇತಿ ಶಿಬಿರವನ್ನು ಸಂಸ್ಥೆಯ ವತಿಯಿಂದ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು ಎಂದು ತಿಳಿಸಿದರು. ನಂತರ ಸಂಸ್ಥೆಯ ಹಿರಿಯ ನಿರ್ದೇಶಕರು ಹಾಗೂ ನನಗೆ ತಂದೆಯ ಸ್ಥಾನದಲ್ಲಿದ್ದು ಸಲಹೆ ಸೂಚನೆಗಳನ್ನು ನೀಡುತ್ತಾ ಸಂಸ್ಥೆಯ ಅಭಿವೃದ್ಧಿಗೆ |

| | | |
|---|---|---|
| | | ಶ್ರಮಿಸುತ್ತಿದ್ದ ಶ್ರೀಯುತ ಪೂಜ್ಯ ಬಿ.ಎಸ್.ಲಕ್ಷ್ಮೀಪತಿ ಜೋಯಿಸರವರು ದಿನಾಂಕ 16.07.2016 ರಂದು ಸ್ವರ್ಗಸ್ತರಾಗಿರುತ್ತಾರೆ. ಅವರ ಸಾವು ಸಂಸ್ಥೆಗೆ ಭರಿಸಲಾಗದ ನಷ್ಟವಾಗಿರುತ್ತದೆ. ಅವರ ಅಗಲಿಕೆಯ ನೋವನ್ನು ತುಂಬುವ ಶಕ್ತಿಯನ್ನು ಅವರ ಕುಟುಂಬಕ್ಕೆ ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.<br>ಸಂಸ್ಥೆಯ ಸಂಸ್ಥಾಪಕರಾದ ಎಸ್.ಎಂ.ಲಿಂಗಪ್ಪನವರ ಜನ್ಮ ಶತಾಬ್ದಿಯನ್ನು 2015ರಲ್ಲಿ ಆಚರಿಸಲು ತೀರ್ಮಾನಿಸಲಾಗಿತ್ತು. ಆದರೆ ಎಲ್ಲಾ ಸರ್ಕಾರಿ ದಾಖಲೆಗಳಲ್ಲಿ ಅವರ ಜನ್ಮ ವರ್ಷವು 1918 ಎಂದು ನಮೂದಾಗಿರುವುದರಿಂದ 2018ಕ್ಕೆ ಶ್ರೀಯುತರ ಜನ್ಮ ಶತಾಬ್ದಿಯನ್ನ ಆಚರಿಸಲು ತೀರ್ಮಾನಿಸಿದ್ದೇವೆ ಎಂದು ತಿಳಿಸಿದರು. ಪ್ರತಿ ವಿದ್ಯಾರ್ಥಿಯಿಂದ ರೂ 200ಗಳನ್ನು ಸಂಗ್ರಹಿಸಲಾಗಿತ್ತು ಮತ್ತು ನಿರ್ದೇಶಕರಾದ ಶ್ರೀ ಎ.ಎಂ.ನಂಜುಂಡೇಗೌಡರು 5,000 ರೂಗಳು ಮತ್ತು ಅವರ ಮಗ ಶಿವಲಿಂಗೇಗೌಡರು 5000 ರೂಗಳನ್ನ ಹಾಗೂ ಸಂಸ್ಥೆಯ ಮತ್ತೊಬ್ಬ ನಿರ್ದೇಶಕಿಯರಾದ ಶ್ರೀಮತಿ ಕೆ.ಎಂ. ಪುಟ್ಟಲಕ್ಷ್ಮಮ್ಮನವರು 10,000 ರೂಗಳನ್ನ ನೀಡಿರುತ್ತಾರೆ. ಈ ಎಲ್ಲಾ ಹಣವನ್ನ ಬ್ಯಾಂಕಿನಲ್ಲಿ ಮುದ್ದತಾ ಠೇವಣಿಯಾಗಿ ಇಡಲಾಗಿದೆ ಎಂದು ತಿಳಿಸಿದರು. ದೇಣಿಗೆ ನೀಡಿದ ಎ.ಎಂ.ನಂಜುಂಡೇಗೌಡರಿಗೆ, ಶಿವಲಿಂಗೇಗೌಡರಿಗೆ ಹಾಗೂ ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮನವರಿಗೆ ಅಭಿನಂದನೆಗಳನ್ನು ತಿಳಿಸಿದರು. |
| 11. | ವಂದನಾರ್ಪಣೆ | ಸಂಸ್ಥೆಯ ಎಸ್.ಎಂ.ಲಿಂಗಪ್ಪ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ |

| | | |
|---|---|---|
| | | ಬಿ.ಎಸ್.ರಘುಪತಿಯವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಕಾರ್ಯದರ್ಶಿಯವರು, ನಿರ್ದೇಶಕರುಗಳು, ಸದಸ್ಯರುಗಳು ಹಾಗೂ ಎಲ್ಲಾ ವಿಭಾಗದ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನ ಸಲ್ಲಿಸಿದರು. |
| 12. | ರಾಷ್ಟ್ರಗೀತೆ | ಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ಗೌರವಯುತವಾಗಿ ರಾಷ್ಟ್ರಗೀತೆಯನ್ನ ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ತಾರೀಖು: 26.07.2016

ಸ್ಥಳ: ಗ್ರಾಮ ಭಾರತಿ ವಿದ್ಯಾಸಂಸ್ಥೆ ಆವರಣ

ಕೆ.ಆರ್.ಪೇಟೆ.

–ಸಹಿ–

(ಎಸ್.ಸಿ.ಕಿರಣ್ ಕುಮಾರ್)

(ಸಭಾಧ್ಯಕ್ಷರು)

## ಮಹಾಸಭೆ: 29

## 2016–17 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

## ತಾ॥ 23.07.2017

ಗ್ರಾಮಭಾರತಿ ವಿದ್ಯಾಸಂಸ್ಥೆ (ರಿ) ಕೃಷ್ಣರಾಜಪೇಟೆ, ಈ ವಿದ್ಯಾಸಂಸ್ಥೆಯ 2016–17 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನ ದಿನಾಂಕ: 23.07.2017 ನೇ ಭಾನುವಾರ ಮಧ್ಯಾಹ್ನ 2:00 ಘಂಟೆಗೆ ಸರಿಯಾಗಿ ವಿದ್ಯಾಸಂಸ್ಥೆ ಆವರಣದಲ್ಲಿ ಸಂಸ್ಥೆಯ ಘನ ಅಧ್ಯಕ್ಷರಾದ ಶ್ರೀಮಾನ್ ಎಸ್.ಸಿ.ಕಿರಣ್ ಕುಮಾರ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಮಹಾಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳು.

ಹಾಜರಿ :– ಹಾಜರಿಯಾಗಿದ್ದ ಸದಸ್ಯರುಗಳ ಸಹಿಯನ್ನ ಅಲಾಯಿದ ಪಡೆದುಕೊಳ್ಳಲಾಗಿದೆ.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ವಿದ್ಯಾಸಂಸ್ಥೆಯ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯರು ಆದಂತಹ ಶ್ರೀಮತಿ ಲೀಲಾವತಿ ಮತ್ತು ಶ್ರೀಮತಿ ಜಯಶ್ರೀಯವರು ಪ್ರಾರ್ಥನೆಯನ್ನು ನಡೆಸಿಕೊಟ್ಟರು. |
| 2. | ಸ್ವಾಗತ ಭಾಷಣ | ವಿದ್ಯಾಸಂಸ್ಥೆಯ ಪಿ.ಯು.ಸಿ. ವಿಭಾಗದ ಎಸ್.ಎಂ.ಲಿಂಗಪ್ಪ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಿ.ಎಸ್.ರಘುಪತಿಯವರು ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಯವರು, ನಿರ್ದೇಶಕರು, ಸದಸ್ಯರುಗಳು ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರನ್ನ ತುಂಬು ಹೃದಯದಿಂದ ಸ್ವಾಗತಿಸಿದರು. |
| 3. | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಓದಿ ರೆಕಾರ್ಡ್ ಮಾಡುವ ವಿಚಾರ. | ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನ ಸಂಸ್ಥೆಯ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪಿ.ಸುರೇಶ್ ರವರು ಓದಿದ್ದನ್ನು |

| | | |
|---|---|---|
| | | ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 4. | ಹಿಂದಿನ ಮಹಾಸಭೆಯ ವರದಿಯನ್ನು ಓದಿ ರೆಕಾರ್ಡ್ ಮಾಡುವುದು | ಹಿಂದಿನ ಮಹಾಸಭೆಯ ವರದಿಯನ್ನು ಪ್ರೌಢಶಾಲಾ ವಿಭಾಗದ ಮುಖ್ಯಶಿಕ್ಷಕರಾದ ಶ್ರೀ ಹೆಚ್.ಎಸ್.ಕೃಷ್ಣರವರು ಓದಿದ್ದನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ತೀರ್ಮಾನಿಸಿತು. |
| 5. | ಸಂಘದ ವರದಿಯನ್ನು ಮಂಡಿಸುವುದು. | 2016–17ನೇ ಸಾಲಿನಲ್ಲಿ ಸಂಸ್ಥೆಯು ಕೈಗೊಂಡ ಕಾರ್ಯಕ್ರಮಗಳನ್ನ ಪ್ರೌಢಶಾಲಾ ವಿಭಾಗದ ಸಹ ಶಿಕ್ಷಕರಾದ ಶ್ರೀ ಹೆಚ್.ಎನ್.ವಜ್ರಪ್ರಸಾದ್ ರವರು ರೆಕಾರ್ಡ್ ಮಾಡಿಕೊಂಡು ಅದರ ಜೊತೆಗೆ ಸಾಧನೆಗಳ ವಿವರಗಳನ್ನು ವಿಡಿಯೋ ಚಿತ್ರಣಗಳಿಂದ ಭಿತ್ತರಿಸಲಾಯಿತು. ಈ ವರದಿಯನ್ನ ಸಭೆಯು ವೀಕ್ಷಿಸಿ, ಕೇಳಿ ಮತ್ತು ಚರ್ಚಿಸಿ ಸರ್ವಾನುಮತದಿಂದ ಒಪ್ಪಿ ರೆಕಾರ್ಡ್ ಮಾಡತಕ್ಕದ್ದೆಂದು ಸಭೆಯು ತೀರ್ಮಾನಿಸಿತು. |
| 6. | 2016–17ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವ ವಿಚಾರ. | 2016–17ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನ ಪ್ರೌಢಶಾಲಾ ವಿಭಾಗದ ಮುಖ್ಯಶಿಕ್ಷಕರಾದ ಹೆಚ್.ಎಸ್.ಕೃಷ್ಣರವರು ಮಂಡಿಸಿದರು. ಅದನ್ನ ವಿಡಿಯೋ ಮೂಲಕ ತೋರಿಸಲಾಯ್ತು. ಈ ವರದಿಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದರಿಂದ ಇದನ್ನ ಅಂಗೀಕರಿಸತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಿತು. |
| 7. | 2017–18ನೇ ಸಾಲಿನ ಬಡ್ಜೆಟ್ ಮಂಜೂರು ಮಾಡುವುದು. | 2017–18ನೇ ಸಾಲಿನ ಬಡ್ಜೆಟ್ ನ್ನ ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಕೆ.ಜಿ.ಹುಚ್ಚೇಗೌಡರ ಪರವಾಗಿ ಶ್ರೀ ಕೆ.ಶಿವರಾಮೇಗೌಡರು ಕೆಳಕಂಡಂತೆ ಮಂಡಿಸಿದರು. |

**2017–2018ನೇ ಸಾಲಿನ ಬಡ್ಜೆಟ್ ಮಂಜುರಾತಿ ವಿವರ.**

| ಕ್ರ.ಸಂ. | ವಿವರ | 2016-17ನೇ ಸಾಲಿಗೆ ಮಂಜೂರಾಗಿರುವುದು | 2016-17ನೇ ಸಾಲಿಗೆ ಖರ್ಚಾಗಿರುವುದು | 2017-18ನೇ ಸಾಲಿಗೆ ಮಂಜೂರಾತಿ ಕೋರಿರುವುದು. |
|---|---|---|---|---|
| 1 | ಸಂಸ್ಥೆಯ ನೌಕರರ ಸಂಬಳ | 35,00,000-00 | 31,79444-00 | 45,00,000-00 |
| 2 | ವಾರ್ಷಿಕ ವಿದ್ಯುಚ್ಛಕ್ತಿ | 75,000-00 | 54,039-00 | 75,000-00 |
| 3 | ವಾರ್ಷಿಕ ಮಹಾಸಭೆಯ ಖರ್ಚು | 50,000-00 | 11850-00 | 50,000-00 |
| 4 | ಪುಸ್ತಕ ಮತ್ತು ವಿಜ್ಞಾನ ಉಪಕರಣಗಳು | 50,000-00 | ---- | 50,000-00 |
| 5 | ಪ್ರಯಾಣ ಭತ್ಯೆ | 25,000-00 | ---- | 25,000-00 |
| 6 | ಅತಿಥಿ ಸತ್ಕಾರ ಮತ್ತು ಗೌರವ ಧನ | 2,00,000-00 | 35,635-00 | 2,00,000-00 |
| 7 | ಅಂಚೆ ವೆಚ್ಚ | 5,000-00 | 650-00 | 5,000-00 |
| 8 | ಅನಿರೀಕ್ಷಿತ ವೆಚ್ಚ | 1,50,000-00 | 153-00 | 1,50,000-00 |
| 9 | ಜಾಹಿರಾತು ವೆಚ್ಚ | 25,000-00 | 8,000-00 | 25,000-00 |
| 10 | ಫರ್ನೀಚರ್ ವೆಚ್ಚ | 2,00,000-00 | 15,000-00 | 2,00,000-00 |
| 11 | ಸಾದಿಲ್ವಾರ್ ವೆಚ್ಚ ಮತ್ತು ಲೇಖನ ಸಾಮಾಗ್ರಿಗಳು | 2,00,000-00 | 59,505-00 | 2,00,000-00 |
| 12 | ವಿದ್ಯಾಸಂಸ್ಥೆ ಕಟ್ಟಡ ಹಾಗೂ ಆಸ್ತಿ ನಿರ್ವಹಣ ವೆಚ್ಚ | 5,00,000-00 | 99,100-00 | 10,00,000-00 |
| 13 | ಮುಂಗಡ ಹಣ ಮತ್ತು ಸಾಲಗಳ ಮರುಪಾವತಿ ವೆಚ್ಚ | 1,60,000-00 | ---- | 1,60,000-00 |
| 14 | ಸ್ಥಿರ ನಿಧಿಗಾಗಿ | 10,00,000-00 | 9,00,000-00 | 10,00,000-00 |
| 15 | ಬಿ.ಇಡಿ., ಪಿ.ಯು.ಸಿ. ನವೀಕರಣ ಶುಲ್ಕ ಪಾವತಿಸಲು | 2,00,000-00 | 1,59,310-00 | 2,00,000-00 |
| | **ಒಟ್ಟು** | **63,40,000-00** | **45,22,686-00** | **78,40,000-00** |

ಮೇಲ್ಕಂಡ ಬಡ್ಜೆಟ್ ನ್ನ ಮಂಜೂರು ಮಾಡತಕ್ಕದ್ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

| | | |
|---|---|---|
| 8. | ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಚುನಾವಣೆಯ ಪಲಿತಾಂಶ ಪ್ರಕಟಣೆ. | ಸಂಸ್ಥೆಯ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆ ನಡೆಸಲು ವ್ಯವಸ್ಥೆ ಮಾಡಿದ್ದು 2017-2022ನೇ ಸಾಲಿಗೆ ನಡೆಯಬೇಕಿದ್ದ ಚುನಾವಣೆಗೆ ಈ ಕೆಳಕಂಡವರು ಉಮೇದುವಾರಿಕೆ ಅರ್ಜಿ ಹಾಕಿದ್ದರು. ಅವರುಗಳೇ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಗ್ರಾಮಭಾರತಿ ವಿದ್ಯಾಸಂಸ್ಥೆಯ ಚುನಾವಣಾಧಿಕಾರಿಗಳಾದ ಟಿ.ಸುರೇಶ್ ರವರು ಫಲಿತಾಂಶವನ್ನ ಘೋಷಣೆ ಮಾಡಿದ್ದನ್ನ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ಮಾಡತಕ್ಕದ್ದೆಂದು ತೀರ್ಮಾನಿಸಿತು. |

1. ಶ್ರೀ ಎಸ್.ಸಿ.ಕಿರಣ್ ಕುಮಾರ್ ಬಿನ್ ಎಸ್.ಸಿ.ಚಿಕ್ಕಣ್ಣಗೌಡ
   ನಂ.1166, ಶ್ರೀ ಮಂಜುನಾಥನಿಲಯ, ಹಳೇ ವಿಜಯಾಬ್ಯಾಂಕ್ ರಸ್ತೆ,
   ಕೃಷ್ಣರಾಜಪೇಟೆ.
2. ಶ್ರೀಮತಿ ಕೆ.ಎಂ.ಪುಟ್ಟಲಕ್ಷ್ಮಮ್ಮ ಕೋಂ. ಎಸ್.ಸಿ.ಚಿಕ್ಕಣ್ಣಗೌಡ
   ನಂ.1166, ಶ್ರೀ ಮಂಜುನಾಥನಿಲಯ, ಹಳೇ ವಿಜಯಾಬ್ಯಾಂಕ್ ರಸ್ತೆ,
   ಕೃಷ್ಣರಾಜಪೇಟೆ.
3. ಶ್ರೀ ಕೆ.ಜಿ.ಹುಚ್ಚೇಗೌಡ ಬಿನ್ ಲೇಟ್ ಗಿರೀಗೌಡ
   ಕರೋಟಿ ಗ್ರಾಮ, ಕಸಬಾ ಹೋ॥, ಕೃಷ್ಣರಾಜಪೇಟೆ ತಾಲ್ಲೂಕು.
4. ಶ್ರೀ ಎ.ಎಂ.ನಂಜುಂಡೇಗೌಡ ಬಿನ್ ಮರೀಗೌಡ
   ಐನೋರಹಳ್ಳಿ ಗ್ರಾಮ, ಕಿಕ್ಕೇರಿ ಹೋಬಳಿ, ಕೃಷ್ಣರಾಜಪೇಟೆ ತಾಲ್ಲೂಕು.
5. ಶ್ರೀ ಎಸ್.ಸಿ.ರಾಮಲಿಂಗೇಗೌಡ ಬಿನ್ ಎಸ್.ಕೆ.ಚಿಕ್ಕಣ್ಣಗೌಡ
   ನಿವೃತ್ತ ಪಾಲಿಟೆಕ್ನಿಕ್ ಉಪನ್ಯಾಸಕರು, ಮನೆ ನಂ.2915, 12ನೇ ಅಡ್ಡರಸ್ತೆ,
   5ನೇ ಮುಖ್ಯರಸ್ತೆ, ವಿ.ವಿ.ಮೊಹಲ್ಲ, ಮೈಸೂರು.
6. ಶ್ರೀ ಎಲ್.ಎನ್.ಯಶ್ವಂತ್ ಕುಮಾರ್ ಬಿನ್ ಎಲ್.ಜಿ.ನಾರಾಯಣಗೌಡ
   ಲೋಕನಹಳ್ಳಿ ಗ್ರಾಮ, ಸಂತೇಬಾಚಹಳ್ಳಿ ಹೋಬಳಿ,
   ಕೃಷ್ಣರಾಜಪೇಟೆ ತಾಲ್ಲೂಕು.
7. ಶ್ರೀ ಎಂ.ಜಿ.ಪರಮೇಶ್ ಬಿನ್ ಗಿರೀಗೌಡ.ಎಂ.ಜಿ.
   ಮರಡಹಳ್ಳಿ, ಶೀಳನೆರೆ ಹೋಬಳಿ, ಕೃಷ್ಣರಾಜಪೇಟೆ ತಾಲ್ಲೂಕು.

| | | |
|---|---|---|
| 9. | ಸಂಸ್ಥೆಯ ಸದಸ್ಯರುಗಳಿಗೆ ಸಲಹೆಗಳನ್ನ ನೀಡಲು ಅವಕಾಶದ ವಿಚಾರ. | ಸಂಸ್ಥೆಯ ಕಾರ್ಯನಿರ್ವಾಹಕ ಮಂಡಳಿಗೆ ಸಂಸ್ಥೆಯ ಸದಸ್ಯರುಗಳಿಗೆ ಸಲಹೆಗಳನ್ನು ನೀಡಲು ಅವಕಾಶಗಳ ಯಾವುದೇ ಸಲಹೆ ಸೂಚನೆಗಳು ಇಲ್ಲದ್ದರಿಂದ ಇದನ್ನ ಸಭೆಯು ಸರ್ವಾನುಮತದಿಂದ ಅಂಗೀಕರಿಸತಕ್ಕದ್ದೆಂದು ತಿರ್ಮಾನಿಸಿತು. |
| 10. | ಅಧ್ಯಕ್ಷರ ಭಾಷಣ | ಗೌರವಾನ್ವಿತ ಅಧ್ಯಕ್ಷರು ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಮಂಡಳಿಯ ನಿರ್ದೇಶಕರುಗಳು, |

| | | |
|---|---|---|
| | | ಸದಸ್ಯರು ಹಾಗೂ ಸಂಸ್ಥೆಯ ಎಲ್ಲಾ ವಿಭಾಗದ ಬೋಧಕ–ಬೋಧಕೇತರ ವರ್ಗದವರನ್ನು ಅಭಿನಂದಿಸುತ್ತಾ ಹಾಗೂ ಹೊಸದಾಗಿ ಆಯ್ಕೆಯಾದ ನಿರ್ದೇಶಕರುಗಳಿಗೆ ಶುಭಾಶಯಗಳನ್ನ ಕೋರುತ್ತಾ ಕಳೆದ ವರ್ಷ ನಮಗೆ ಸವಾಲಿನದಾಗಿತ್ತು ಏಕೆಂದರೆ ಬಿ.ಇಡಿ. ಹಾಗೂ ಡಿ.ಇಡಿ. ಕಾಲೇಜಿಗೆ ದಾಖಲಾತಿಯ ಕೊರತೆಯಿಂದಾಗಿ ಸಂಬಳವನ್ನು ನೀಡುವುದು ತೊಂದರೆಯಾಯಿತು. ಕಳೆದ ಸಾಲಿನಲ್ಲಿ ಸುಮಾರು 7,50,000 ಸಂಬಳವನ್ನು ಈ ವಿಭಾಗಗಳಿಗೆ ನೀಡಲು ಹಣ ಕಡಿಮೆ ಬಂದಿದ್ದರಿಂದ ನಾವು ಇಟ್ಟಿದ್ದ ಮುದ್ದತಾ ಠೇವಣಿಯನ್ನು ಹಿಂಪಡೆದು ಸಂಬಳವನ್ನ ನೀಡಲಾಯಿತು. ಈ ವರ್ಷವೂ ಸಹ ಬಿ.ಇಡಿ. ಕಾಲೇಜಿಗೆ ದಾಖಲಾತಿ ಪೂರ್ಣವಾಗಿರುವುದಿಲ್ಲ. ಡಿ.ಇಡಿ. ಕಾಲೇಜಿಗೆ ಕಳೆದ ಮೂರು ವರ್ಷದಿಂದ ದಾಖಲಾತಿ ಇಲ್ಲದ್ದರಿಂದ ಡಿ.ಇಡಿ. ವಿಭಾಗವನ್ನ ಮುಚ್ಚಲು ಕಳೆದ ಸಾಲಿನಲ್ಲಿ ತೀರ್ಮಾನಿಸಲಾಯಿತು. ಮುಂದಿನ ವರ್ಷ ಬಿ.ಇಡಿ. ಕಾಲೇಜಿಗೆ ಉತ್ತಮ ದಾಖಲಾತಿ ಆಗುವುದೆಂದು ಆಶಾಭಾವನೆಯೊಂದಿಗೆ ಮುನ್ನಡೆಯೋಣವೆಂದು ತಿಳಿಸಿದರು. 2018ಕ್ಕೆ ಸಂಸ್ಥೆಯ ಸಂಸ್ಥಾಪಕರಾದ ಶ್ರೀಮಾನ್ ಎಸ್.ಎಂ.ಲಿಂಗಪ್ಪನವರ ಜನ್ಮ ಶತಮಾನೋತ್ಸವವನ್ನು ಆಚರಿಸಲು ತೀರ್ಮಾನಿಸಲಾಗಿದೆ. ಇದೇ ಸಂದರ್ಭದಲ್ಲಿ ಅವರ ಕುರಿತಾಗಿ ಒಂದು ಪುಸ್ತಕವನ್ನು ಹೊರತರಲು ತೀರ್ಮಾನಿಸಲಾಗಿದೆ. ಅದಕ್ಕಾಗಿ ಮಾನ್ಯ ಸದಸ್ಯರುಗಳಲ್ಲಿ ಅವರ ಬಗ್ಗೆ ಯಾವುದೇ ಮಾಹಿತಿ ಹಾಗೂ ಭಾವಚಿತ್ರಗಳಿದ್ದಲ್ಲಿ ಅವುಗಳನ್ನ ಸಂಸ್ಥೆಗೆ ತಲುಪಿಸಲು |

| | | |
|---|---|---|
| | | ಕೋರಿದರು. ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರು ಮತ್ತು ಸಿಬ್ಬಂದಿ ವರ್ಗದವರಿಗೆ ನೀವುಗಳೆಲ್ಲ ಸಂಸ್ಥೆಯ ಏಳ್ಗೆಗಾಗಿ ದುಡಿಯುವಿರೋ ಅದರ ದುಪ್ಪಟ್ಟು ಸಂಸ್ಥೆಯಿಂದ ನಿಮಗೆ ಒಳ್ಳೆಯದಾಗುತ್ತದೆ ಎಂದು ತಿಳಿಸಿದರು. |
| 11. | ವಂದನಾರ್ಪಣೆ | ಸಂಸ್ಥೆಯ ಪ್ರೌಢಶಾಲೆಯ ಶ್ರೀ ಹೆಚ್.ಎನ್.ವಜ್ರಪ್ರಸಾದ್ ರವರು ಸಭೆಯಲ್ಲಿ ಹಾಜರಿದ್ದ ಗೌರನ್ವಿತ ಅಧ್ಯಕ್ಷರು, ನಿರ್ದೇಶಕರು, ಸದಸ್ಯರುಗಳು, ಎಲ್ಲಾ ವಿಭಾಗದ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನ ಸಲ್ಲಿಸಿದರು. |
| 12. | ರಾಷ್ಟ್ರಗೀತೆ | ಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ನಿಂತು ಗೌರವಯುತವಾಗಿ ರಾಷ್ಟ್ರಗೀತೆಯನ್ನ ಹಾಡುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ದಿನಾಂಕ: 23.07.2017 –ಸಹಿ–

ಸ್ಥಳ: ಗ್ರಾಮ ಭಾರತಿ ವಿದ್ಯಾಸಂಸ್ಥೆ ಆವರಣ (ಎಸ್.ಸಿ.ಕಿರಣ್ ಕುಮಾರ್)23/07/17

ಕೆ.ಆರ್.ಪೇಟೆ. (ಸಭಾಧ್ಯಕ್ಷರು)